Azim Premji Foundation

Karnataka Field Institutes October 2014 Issue No.: 26

# ಬಯಲು Bayalu

*....a space of our own*



# Contents


1. **A good break!** ***(English) by Peri*** ..... 2
2. **Holiday Means Exotic Vacation** ***(English) by Ravi Shreedharan*** ..... 3
3. ವಿಶ್ರಾಂತಿ......... ಮನಕ್ಕೆ ಶಾಂತಿ: ***Relax: Peace of mind (Kannada) by Krishna Kothai*** ..... 4
4. **Holidays, moments with nature** ***(English) by Randeep Kaur*** ..... 5
5. ರಜೆಯಲ್ಲಿ........ ***In holidays (Kannada) by Ramachandra Bhat*** ..... 6
6. ಬಿಡುವು ಸಿಕ್ಕಾಗ............ ***When I got a break (Kannada) by Divakar K*** ..... 6
7. **Holiday** ***(English) by B Ramadevi*** ..... 8
8. ಶಿಬಿರ ಮುಗಿದ ಮೇಲೆ ***After the holiday camp.....(Kannada) by Sathyasakshi Tumari (Maithili)*** ..... 9
9. ರಜೆಯ ಮಜಾ ನೆನಪುಗಳು ***Holiday: some memories (Kannada) by Shadakshari T*** ..... 10
10. ಖಾಲಿ ಡಬ್ಬಾ...***Empty Box (Kannada) by Lohit Chamanur*** ..... 11
11. ರಜಾ ದಿನದ ಕುರಿತು. ***About holidays (Kannada) by Showrish Kudkuli......*** ..... 11
12. **Put your feet up** ***(English) by Helan K B....*** ..... 12
13. ಪ್ರೀತಿಯ ಗೂಡು ***Nest of Love (Kannada) by Hemanth M*** ..... 13
14. ಹಾಲಿಡೇ - ಶ್ರಮದ ನಡುವಿನ ವಿರಾಮ? ***Holiday: Amidst labour, leisure and boredom (Kannada) by Narayan A*** ..... 13
15. ಹೇಗೆ ಮರೆಯಲಿ ಆ ಸಂಭ್ರಮದ ಕ್ಷಣಗಳನು? ***How can i forget those joyeful moments (Kannada) by K C Basavarajappa*** ..... 14
16. ಉಳ್ಳವರ ಸಣ್ಣತನ: ***Meanness of Wealthy (Kannada) by Gopalkrishna I*** ..... 15
17. ಮಧ್ಯರಾತ್ರಿ ಸಿಕ್ಕ ರಜೆ: ***When i get holiday at midnight (Kannada) by Gundappa Katekar*** ..... 16
18. ರಜಾದಿನಗಳು... ***Holidays (Kannada) by Kalandar S*** ..... 17
19. ರಜಾ ದಿನ ಹೀಗೂ ಅರ್ಥಪೂರ್ಣವಾಗಿಸಬಹುದೇ? ***Can we make holidays meaningful? (Kannada) by Najivi (Nagananda)*** ..... 18
20. ಕೇಳೇ ಗೆಳತಿ.... ***Listen! Oh my friend (Kannada) by Harishkabligere*** ..... 19
21. ರಜೆ ನನ್ನ ಅನುಭವದಲ್ಲಿ ***Holiday in my experinece (Kannada) by Srilatha K N*** ..... 19
21. **Cool Clicks** ***by Anil Angadiki*** ..... 21

## 1. A good break!

- ***Peri***



The most needed thing at any point in my life had been a break-a good break. During the initial phases in my life the breaks would come almost at the edge of my break down! The break had always been when I had needed it the most. Then came a stage in my life when I took breaks as soon as I anticipated a break down. Even today, I envy those who can plan a break in their life and career and smoothly sail through, giving us a feeling that everything in their life is so very well-balanced.

I have a feeling that our body and mind both want a break at regular intervals and like fools neither can we find out if our body is tired or our mind needs a break. But, the body is more sincere and straight. When it is tired, it just gives some signals and then it just collapses if you further strain it. But, not so the tricky brain. It will give you a very mild and feeble signal. If we are not sensitive and are not aware of the workings of the mind it will continue functioning but, at a very sub-optimal level, gives you a feeling that you are doing FINE! You feel that you are doing so well, but the whole world will know what a stupid fool you are.

All our work related to land had a rhythm which had all these things. Work, heavy work, light work, no work -a good break. Agriculture and Pottery, I can say is built like this. With the rain starts, immediately heavy work, tilling the land sowing, transplanting etc takes place. Then there is time till harvest where you have to just look after your crop. Once, it comes to the stage of harvest there is a lot of work. If you have immediately another crop, then there is hectic work, if not then there is a break - a long break till the next rain. This continues. Connected with harvest and the break that follows, is the festivity and celebration, drama, Yakshagana - everything happens then. Closely connected in a similar pattern is the pottery work. In pottery t oo there is heavy work, maintaining work which is light touch work, and then after the heavy work during firing there is a break!




Every routine needs a break. What is the meaning when your break becomes a routine? It does not serve as a break and there is no benefit from that break. We say our work should be integrated, but, we say that the personal and the professional life should never be mixed. We say everything should be aligned but consciously de-align the family and the career. This alienation is maddening us, it is this alienation that will kill us before we die! We need to organize our life. Organizing life is not compartmentalizing it. It is not breaking life in to smaller manageable units. We are not supposed to manage life but, ***lead life***! Organizing life is integrating everything, aligning everything and building an integrated whole which has a place for everything. Big, small, heavy, light. Speed and Break. Where break is a way of life and not a forced thing. A quilt which is colorful and comfortable. Which is light but warm and durable. Can we once again weave everything in to a nice little quilt?

## 2. Holiday Means Exotic Vacation

- ***Ravi Shreedharan***



Holidays are points in the year that allow people to take a break from their normal schedules. Whether that means an exotic vacation, a moment to sit back and breathe, a frantic rush to get other work done before resuming the regular grind, or just another day. Holidays can be joyful, hectic, exciting, dull, and can mean different things to different people; but at the end of the day, they are a shared social experience.

I was very fortunate. Growing up, holidays were the most exciting times in my life, and I would go so far as to say, they played a key role in my development into the man I am today. As a boy in Odisha, every year I would return to Kerala, my native place, and spend two months living a life that was a stark contrast to my school days.

For those two months, I was able to substitute the forests of Odisha with the paddy fields of Kerala, the hills for the coconut trees. It allowed me to have experiences that weren't possible once I got back home. During the days, we had the opportunity to walk across the paddy fields, discovering species of worms, insects, birds and reptiles, with no worries about muddied feet and potential for picking up a skin illness from such proximity with nature. With the abundance of coconut trees, I learnt the infinite ways in which you could get use and entertainment from its leaves; from converting the dried spines into cricket bats, while the thinner ones could be fashioned into make-shift tongue-cleaners, to applying the penicillin found under the leaves on small wounds. The jackfruit leaves became throw-away spoons, and the catapults made from branches provided hours of fun. And these were just the differences that coconut and jackfruit brought to my holiday life.

It was during holidays that I learnt to swim, to read and write Malayalam, and climb tall trees. As the heavy rains came down in sheets through the thick foliage, we would invent numerous games, found out about our rich mythology narrated by my elders in Malayalam, and attempted to draw family trees, tracing our lineage back to decades gone by. I listened to heated arguments on politic parties, discussing the dark happenings of the Emergency, and watching the beedi rollers doing their job, merrily listening to someone reading the news for the day.

These experiences were not planned. They were not organised. There was no bounded theory off of which it was based, nor a teacher to explain things to us. Yet these experiences made a huge contribution to my learning, growing up, the values I developed, the ideas and aspirations that developed in me. Some of these experiences have stayed with me much more than things I learnt at school – though, I am sure, these experiences would have been influenced and guided by what I had learnt at school.

For me, I feel that holidays are a huge compliment to what happens during school days. It is a time for curiosity, exploration and building relationships with both people and nature, and it is a time where unstructured, self-learning takes over.

Good teachers and schools understand the importance of holidays – be it long vacations, or short weekend breaks, and its contribution to a child's learning, development and growth. I imagine that every child might have very different experiences during the holidays and days off from school, and the reality is, not everyone might have happy and enjoyable holidays. However, irrespective of their experiences, it is essential to draw from them and integrate them into the learning process back in schools and class rooms.

Holidays are an integral part of childhood and one wishes them to be enjoyable and dignified for every child in the world, and we should make sure that education and development does not stop once the bell rings for the end of the school day.





## 3. ವಿಶ್ರಾಂತಿ......... ಮನಕ್ಕೆ ಶಾಂತಿ

- ***ಕೃಷ್ಣ ಕೊತಾಯ***

ಪ್ರಖ್ಯಾತ ನಾಟಕಕಾರ– ರಂಗಕರ್ಮಿ, ಬಾದಲ್ ಸರ್ಕಾರ್‌ರ ನಾಟಕ ಒಂದರ ದೃಶ್ಯ.............ರಂಗದ ಮೇಲೆ ಪುಟ್ಟ ಮೇಜನ್ನು ಇರಿಸಲಾಗಿದೆ. ನಾಯಕ ನಟ ಆ ಮೇಜಿಗೆ ನಿಲುಗಡೆ ಇಲ್ಲದೇ ಸುತ್ತುವ ಸನ್ನಿವೇಶ. ಮಧ್ಯಮ ವರ್ಗದವರ ಬದುಕಿನ 'ಏಕತಾನತೆಯನ್ನು' ಸರ್ಕಾರ್ ಸಾಂಕೇತಿಕವಾಗಿ ತಿಳಿಸುವ ರೀತಿ ಇದು! ಬದುಕೆಂಬುದು 'ಗಾಣಕ್ಕೆ ಕಟ್ಟಿದ ಎತ್ತಿನಂತೆ' ಎಂಬ ಮಾತೊಂದಿದೆಯಲ್ಲ. ಈ ತೆರನಾದ ಬದುಕಿನಲ್ಲಿ 'ನವೀನತೆಗಿಂತ', 'ಏಕತಾನತೆಗೆ' ಹೆಚ್ಚು ಪ್ರಾಶಸ್ತ್ಯ.

ಸೋಮವಾರ ಬಂತೆಂದರೆ ಆರಂಭವಾಗುವ ಅವೇ ಚಟುವಟಿಕೆಗಳು. ಬೇಗ ಏಳು.... ತಯಾರಾಗು......... ವಾಹನ ಹಿಡಿಯಲು ಓಡು... ಬಸ್ಸಿನಲ್ಲಿ ಅದೇ ನೂಕಾಟ– ತಳ್ಳಾಟ... ಜಗಳ..... ಕಛೇರಿ ಸೇರು... ಕಛೇರಿ ಕೆಲಸ..... ಸಂಜೆ ಮನೆಗೆ ಸೇರು.... ಮತ್ತೊಂದು ದಿನ ಆರಂಭ....... ಇದೇ ದಿನಚರಿ. ವಾರಾಂತ್ಯವೆಂದರೆ 'ವಿಶ್ರಾಂತಿ' ಇದೆಯೆ?

'ವಿಶ್ರಾಂತಿ' ಎಂಬುದೊಂದು ಮನಸ್ಥಿತಿ. ಕೆಲವೊಮ್ಮೆ 'ವಿಶ್ರಾಂತಿ' ಹಾಗೂ 'ಕೆಲಸದ' ನಡುವಿನ ವ್ಯತ್ಯಾಸ ಬಹಳ ಕಡಿಮೆ ಎನಿಸುವುದುಂಟು. ಉದಾಹರಣೆಗೆ ದುಡಿಯುವ ಮಧ್ಯಮ ವರ್ಗದ ಮಹಿಳೆಗೆ 'ವಿಶ್ರಾಂತಿ' ಇದೆಯೇ? ಕಛೇರಿ, ಮನೆ, ಮಕ್ಕಳು.... ಎಲ್ಲಿಯ ವಿಶ್ರಾಂತಿ? ಇನ್ನು ಕೆಲವರು 'ವಿಶ್ರಾಂತಿ'ಯನ್ನೇ ಜೀವನದ ಪರಮ ಧ್ಯೇಯವನ್ನಾಗಿ ಮಾಡಿಕೊಂಡಿರುತ್ತಾರೆ. ಅವರು ಕಛೇರಿಯಲ್ಲಿ, ಮನೆಯಲ್ಲಿ ಎಲ್ಲೆಡೆ ವಿಶ್ರಾಂತಿಗೆ ಶರಣಾಗುತ್ತಾರೆ! ಈ ವರ್ಗವನ್ನು 'ಶುದ್ಧ ಸೋಮಾರಿ ವರ್ಗ' ಎಂದು ಗುರುತಿಸಲಾಗಿದೆ. ಇನ್ನೊಂದು ವರ್ಗ ಕಛೇರಿಯನ್ನು ತಮ್ಮ ಬೆನ್ನಿಗೆ ಕಟ್ಟಿಕೊಂಡು ತಿರುಗುವ ವರ್ಗ. ಇವರು ವಿಶ್ರಾಂತಿ ಪಡೆಯಲಾರರು. ರಜಾ ದಿನ ಕೆಲಸ ಮಾಡುವ ಮಂದಿ ಕಛೇರಿ ಇವರ 'ಬಂಧೀಖಾನೆ'!.

ಪಾಶ್ಚಿಮಾತ್ಯ ಪ್ರಪಂಚದಲ್ಲಿ ವಿಶ್ರಾಂತಿ ಕಲ್ಪನೆ ವಿಭಿನ್ನವಾದುದು. ಕೆಲಸದ ಸಮಯದಲ್ಲಿ ಅವರು ಮೈಮರೆತು ಕೆಲಸ ಮಾಡುತ್ತಾರೆ. ವಾರಾಂತ್ಯದಲ್ಲಿ ಕೆಲಸ ಮರೆತು ಸಂಭ್ರಮಿಸುತ್ತಾರೆ. ಕಛೇರಿಯನ್ನು ಮನೆಗೊಯ್ಯುವ ಕ್ರಮ ಅಲ್ಲಿಲ್ಲ. ಅವರು ವರ್ಷಕ್ಕೊಮ್ಮೆ ದೀರ್ಘ ರಜೆ ಪಡೆದು, ತಮ್ಮ ಆಸಕ್ತಿಯ ತಾಣಗಳಿಗೆ ಭೇಟಿ ಕೊಡುತ್ತಾರೆ. ತಮ್ಮ ನೆಚ್ಚಿನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಯೂರೋಪಿನ ಒಂದು ದೇಶದಲ್ಲಿ ಒಮ್ಮೆ ಒಬ್ಬ ಶಿಕ್ಷಕನನ್ನು ಭೇಟಿಯಾಗಿದ್ದೆ. ಆತ ರಜೆ ಕಳೆಯಲು ಅಲ್ಲಿಗೆ ಬಂದಿದ್ದ. ಪ್ರತಿ ವರ್ಷ ಬೇರೆ, ಬೇರೆ ಕಡೆಗೆ ಸಂಚಾರ ಹೋಗುವುದಾಗಿ ಆತ ಹೇಳಿದ್ದ. ಆ ಸಂಚಾರಕ್ಕಾಗಿ ಆತನ ವಾರ್ಷಿಕ 'ಬಜೆಟ್' ನಲ್ಲಿ ಒಂದಿಷ್ಟು ಹಣ ಬೇರೆಯೇ ಇಡುವುದಾಗಿ ಆತ ಹೇಳಿದ ನೆನಪು. ಕುಟುಂಬದ ಖರ್ಚಿನ ಒಂದು ಭಾಗ 'ವಿಶ್ರಾಂತಿ' ಗಾಗಿ ಮೀಸಲಿಡಲಾಗುತ್ತದೆಂದು ಆತ ಹೇಳಿದ್ದ. ಪಾಶ್ಚಿಮಾತ್ಯರಿಗೆ 'ವಿಶ್ರಾಂತಿ' ಕೆಲಸದ ಒಂದು ಅವಿಭಾಜ್ಯ ಅಂಗ.

ನಮ್ಮ ದೇಶದಲ್ಲಿ 'ವಿಶ್ರಾಂತಿ'ಯ ಕಲ್ಪನೆ ಬೇರೆ ತೆರನಾದುದು. ಪ್ರಹರಗಳಲ್ಲಿ ವಿಶ್ರಾಂತಿ ಎಂದರೆ ವಾರಾಂತ್ಯದಲ್ಲಿ ಮೈಮರೆತು ನಿದ್ರೆ ಹೋಗುವುದು (ಐಟಿ, ಬಿಟಿ ಮಂದಿ), ದೂರದರ್ಶನದೆದಿರು ದಿನವಿಡೀ ಕುಳಿತಿರುವುದು, ಮಾಲ್‌ಗಳಿಗೆ ಲಗ್ಗೆ ಇಡುವುದು ಇತ್ಯಾದಿ. ಬೆಂಗಳೂರಿನಂತಹ ನಗರಗಳಲ್ಲಿ ರಜಾದಿನಗಳಲ್ಲಿ ನೆಂಟರ ಮನೆಗೆ ಹೋಗುವುದು ಕಷ್ಟದಾಯಕ. ನೀವು ನೆಂಟರನ್ನು ನೋಡಿ ಬರುವಾಗ ಮರುದಿನ ಕಛೇರಿ ಆರಂಭವಾಗಿರುತ್ತದೆ! ಅಥವಾ ಆ ನೆಂಟರು, ಅವರ ನೆಂಟರನ್ನು ನೋಡಲು ಹೋಗಿರುತ್ತಾರೆ. ಪುಟ್ಟ ಶಹರಗಳಲ್ಲಿ ಈ ಸಮಸ್ಯೆ ಇಲ್ಲ.

ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ– ವಿಶ್ರಾಂತಿಯ ನಡುವಿನ ಅಂತರ ಕಡಿಮೆ. ಅವೆರಡೂ ಒಂದಕ್ಕೊಂದು ಹೊಂದಿಕೊಂಡಿರುತ್ತವೆ. ಕೆಲವೊಮ್ಮೆ ಋತುಗಳಿಗನುಗುಣವಾಗಿ ಕೆಲಸ–ವಿಶ್ರಾಂತಿಯನ್ನು ವಿಭಜಿಸಲಾಗುತ್ತದೆ. ಉದಾಹರಣೆಗೆ, ಮಳೆಗಾಲದಲ್ಲಿ ಕೃಷಿ ಕೆಲಸ ಮುಗಿದ ನಂತರ ವಿಶ್ರಾಂತಿ. ಕೊಯ್ಲು ಮುಗಿದ ನಂತರ ಒಂದಿಷ್ಟು ವಿಶ್ರಾಂತಿ. ಹಳ್ಳಿಗಳಲ್ಲಿ ಹಬ್ಬ, ಹರಿದಿನ ಉತ್ಸವಗಳನ್ನು ಒಂದು ರೀತಿಯಲ್ಲಿ 'ವಿಶ್ರಾಂತಿ' ಎಂದು ಭಾವಿಸುವುದುಂಟು.

ಮಕ್ಕಳಿಗೆ ರಜೆಯಲ್ಲಿ ಅಜ್ಜಿ ಮನೆಗೆ ಹೋಗುವುದು ತುಂಬಾ ಸಡಗರದ ಸಂಗತಿಯಾಗಿರುತ್ತಿತ್ತು! ಹಳ್ಳಿಯಿಂದ ಪೇಟೆಗಳಲ್ಲಿರುವ ಬಂಧುಗಳ ಮನೆಗೆ ಹೋಗುವುದೂ ಒಂದು ಸಂಭ್ರಮವಾಗಿರುತ್ತಿತ್ತು. ಇಂದು, ಇದೆಲ್ಲಾ ಮರೆಯಾಗುತ್ತಿವೆ. ಶಹರದ ಮಕ್ಕಳು 'ಅಜ್ಜಿ' ಹಾಗೂ 'ಅಜ್ಜಿ ಮನೆಯಿಂದ' ವಂಚಿತರು. ಈಗ ಅವರೆಲ್ಲಾ ಎಲೆಕ್ಟ್ರಾನಿಕ್ ಉಪಕರಣಗಳ ದಾಸರು! ಪ್ರಕೃತಿಯಿಂದ ದೂರ ಸರಿದ 'ರೋಬೋಟ್‌ಗಳು' ಎಂತಹಾ ದುರಂತ. 'ವಿಶ್ರಾಂತಿಗೆ' ಸಂಬಂಧಪಟ್ಟ ಇನ್ನೊಂದು ಚಿಂತನೆಯೆಂದರೆ 'ಕೆಲಸದ ಬದಲಾವಣೆಯೇ ವಿಶ್ರಾಂತಿ'. ಈ ಚಿಂತನೆ 'ಕಾಯಕವೇ ಕೈಲಾಸ' ಎಂಬುವವರ ಚಿಂತನೆ.

ವಿಶ್ರಾಂತಿಯ ಅರ್ಥವನ್ನೇ ಅರಿಯದ ಒಂದು ದೊಡ್ಡ ವರ್ಗ ನಮ್ಮ ದೇಶದಲ್ಲಿದೆ. ಎರಡು ಹೊತ್ತಿನ ಕೂಳಿಗಾಗಿ ದುಡಿಯುವ ಬಡವನಿಗೆಲ್ಲಿಯ ವಿಶ್ರಾಂತಿ! ತನ್ನ ಮಕ್ಕಳ ಹಸಿವನ್ನು ಹೊಡದೋಡಿಸಲು ದುಡಿಯುವ ಬಡ ಮಹಿಳೆಗೆಲ್ಲಿಯ ವಿಶ್ರಾಂತಿ? ಇವರಿಗೆಲ್ಲಾ 'ವಿಶ್ರಾಂತಿ' ಒಂದು ಅರ್ಥಹೀನ ಶಬ್ಧವಲ್ಲವೇ? ಜೀವ 'ವಿಶ್ರಾಂತಿ' ಬೇಡಿದರೂ ಅದು ಅವರಿಗೆ ಲಭ್ಯವೇ?

ಅಪರಿಮಿತ ಸಂಪತ್ತನ್ನು ಗಳಿಸಿದ್ದರೂ ಇನ್ನೂ ಬೇಕೆಂಬ 'ಜಿಪುಣ'ನಿಗೂ ವಿಶ್ರಾಂತಿ ಇಲ್ಲ! ಆದುದರಿಂದ ವಿಶ್ರಾಂತಿ ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಗೋಚರವಾಗುತ್ತದೆ. ಹಾಗಾದರೆ 'ವಿಶ್ರಾಂತಿ'ಯ ಅರ್ಥವೇನು? ನಿಷ್ಕ್ರೀಯತೆಯೇ? ಕೆಲಸದ ಬದಲಾವಣೆಯೇ? ಮೋಜು–ಮಸ್ತಿಯ ಸಮಯವೇ? ಹೊಸ ತಾಣಗಳ ಸುತ್ತಾಟವೇ? ಹೊಸ ವಿಷಯ ತಿಳಿಯುವುದೇ? ಕಲೋಪಾಸನೆಯೇ? ಬಾದಲ್ ಸರ್ಕಾರ್ ಸೂಚಿಸುವ ಬದುಕಿನ 'ಏಕತಾನತೆ' ಮುರಿಯುವ ಪ್ರಕ್ರಿಯೆಯೇ?

ಹೇಗೇ ಇರಲಿ, 'ವಿಶ್ರಾಂತಿ' ನಮ್ಮನ್ನು ಹೆಚ್ಚು 'ಕಾಯಕ ಪ್ರಿಯರನ್ನಾಗಿ' ಮಾಡಿಸುವುದಾದರೆ, ಆ 'ವಿಶ್ರಾಂತಿ'ಯನ್ನು ಸ್ವಾಗತಿಸೋಣ. ಅವಿರತವಾಗಿ ತಿರುಗುವ ಯಂತ್ರಕ್ಕೆ 'ಎಣ್ಣೆ' ಹೇಗೆ ಅಗತ್ಯವೋ ಹಾಗೆ ಅವಿರತ ದುಡಿಮೆಗೆ 'ವಿಶ್ರಾಂತಿ' ಅಗತ್ಯ. ಕಾಯಕಕ್ಕೆ ನಾವು ಕೊಡಬೇಕಾದ ಮಹತ್ವವನ್ನು ವಿಶ್ರಾಂತಿಗೆ ಕೊಡಲು ಸಾಧ್ಯವಿಲ್ಲ. ಆದರೆ, ಅದರ ಅವಗಣನೆ ಸಲ್ಲದು. ವಿಶ್ರಾಂತಿ, ನಿಷ್ಕ್ರಿಯತೆಯ ಸಂಕೇತವಾಗಬೇಕಾಗಿಲ್ಲ.

'ವಿಶ್ರಾಂತಿ' ದಣಿದ ದೇಹ ಮತ್ತು ಮನಸ್ಸುಗಳಿಗೆ ತಂಪುಣ್ಣಿಸುವ ಕೆಲಸ ಮಾಡಬೇಕು.....ರಜೆ ದಿನ ಈ ಲೇಖನ ಬರೆದಿದ್ದೇನೆ, ವಿಶ್ರಾಂತಿಯಲ್ಲಿ ಸಂತಸ ಕಂಡಿದ್ದೇನೆ.........





## 4. Holidays, moments with nature

- ***Randeep Kaur***

Admiring the hills…

Watching the water swiftly flowing…

Feeling the woods emitting peace and serenity…

Those wild yet delicate flowers… purple, orange and yellow freely hanging all around the woods…

Observing the colourful butterflies sitting on one flower and moving on to the other and gently sucking the nectar…

Water laden breeze flowing making the weather wet…

Trees subtly breathing, grass slowly growing…

Light green leaves gradually turning dark green…

Birds chirping and becoming silent…

Buds blossoming into flowers…

Those were the moments of experiencing different shades and fragrances of nature…

## 5. ರಜೆಯಲ್ಲಿ........

- *ಬಿ.ರಾಮಚಂದ್ರಭಟ್*



ಹೊಟ್ಟೆಪಾಡು ಒಂದಲ್ಲದಿದ್ದರೆ ಈ ಬೆಂಗಳೂರು ನನ್ನಂಥವನಿಗೆ ಬೇಡ. ಕಛೇರಿಯಲ್ಲಿ ಕೆಲಸ ಮಾಡುವುದಾಗಲೀ, ಬೇರೆ ಬೇರೆ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುವುದಾಗಲೀ ಒಂದಿಷ್ಟೂ ಬೇಸರ ತರಿಸುವುದಿಲ್ಲ. ಆದರೆ, ಮನೆಯೆನಿಸುವ ರೂಮಿನಿಂದ ಕಛೇರಿಗೆ ಸಿಟಿ ಬಸ್‌ನಲ್ಲಿ ಬರುವ ಸರ್ಕಸ್ ಮಾತ್ರ ಜನ್ಮಕ್ಕೆ ಬೇಡ ಎನಿಸುತ್ತದೆ. ಬೆಳಗ್ಗಿನ ಸ್ನಾನದ ಸುಖವೆಲ್ಲಾ ಬಸ್ಸಿನೊಳಗೆ ನೀರಾಗಿ ಬಿಡುತ್ತದೆ. ಬಸ್ಸಿನಿಂದ ಇಳಿಯುವಾಗ ಲೋಕ ಗೆದ್ದಷ್ಟು ಸಮಾಧಾನ. ಸಾಯಂಕಾಲ 6 ರ ನಂತರದ ಮರು ಪ್ರಯಾಣವೆಂದರೆ ಅಸಾಧ್ಯ ರಣರಂಗವೇ ಸರಿ. ಸರಿಯಾದ ಬಾಗಿಲಿನಿಂದ ನಿಯತ್ತಾಗಿ ಒಳಹೊಕ್ಕವ ಮುಟ್ಟಾಳ ನೇತಾಡುವುದಕ್ಕೂ ಜಾಗವಿಲ್ಲದ ತ್ರಿಶಂಕು. ಸಭ್ಯರು ಹಾಗಲ್ಲ; ಕಿಟಕಿಯ ಮೂಲಕ ತಮ್ಮ ಬೆನ್ನಿಗಂಟಿದ ಚೀಲವನ್ನು ಒಳತೂರಿಸುತ್ತಾರೆ. ನೇತಾಡುವವರನ್ನು ಬಸ್ಸಿನ ತಳಮುಟ್ಟದಂತೆ ಸರಿಸಿ ಅಸೀನರಾಗಿ ಬಿಡುತ್ತಾರೆ. ಕೊನೆಯವರೆಗೂ ನೇತಾಡಿ, ಇಳಿಯುವಾಗ ಕಂಡೆಕ್ಟರ್ ಚೀಟಿಯ ಹಿಂದುಗಡೆ ಬರೆದುಕೊಟ್ಟ ಚಿಲ್ಲರೆಯನ್ನು ಮರೆತು ಮನೆಗೆ ಸವಾರಿ. "ಚಿಲ್ಲರೆ ಬಿಡಿ; ಒಮ್ಮೆ ಇಳಿದರೆ ಸಾಕು–ಸ್ವರ್ಗಸುಖ".

ಆದರೆ, "ಇದು ರಜೆಯ ಸುಖವನ್ನು ಹೆಚ್ಚಿಸಿದ್ದಷ್ಟು ಸತ್ಯ". ರಜೆ ಬಂದೊಡನೆಯೇ ಊರಿಗೆ ಹೋಗುವ ತವಕ; ಬೆಂಗಳೂರೆಂಬ ಕಟ್ಟಡಗಳ, ವಾಹನಗಳ ಹಾಗೂ ಜನನಿಬಿಡ ಸ್ಥಳಗಳ ಗೊಂಡಾರಣ್ಯದಿಂದ ಆಚೆ. ಇಲ್ಲಿ ನಿರಾಳ. ನಡೆಯುವಾಗ ಕೈ–ಕಾಲಿಗೋ, ಮೈ–ಮಂಡೆಗೋ ತಾಗುವುದಿಲ್ಲ. ರಸ್ತೆ ದಾಟುವಾಗ ಮೈಯೆಲ್ಲಾ ಕಣ್ಣಾಗುವ ಪ್ರಮೇಯವಿಲ್ಲ. ಆರಾಮವಾಗಿ ನಡೆಯುತ್ತಾ ಮನೆ ಸೇರಬಹುದು. ಮನೆ ಉಪಯೋಗಕ್ಕೆ ಹೊಳೆ ನೀರು. ಸುತ್ತಲೂ ದಟ್ಟ ಕಾಡು. ವಾಹನಗಳ ಹಾರ್ನ್ ಶಬ್ಧದ ಜಾಗದಲ್ಲಿ ಹಕ್ಕಿಗಳ ಕೂಗು. ಶನಿವಾರ ಬೆಳಗ್ಗಿನಿಂದ ಭಾನುವಾರ ಮಧ್ಯಾಹ್ನದ ವರೆಗೆ ನನ್ನದೇ ರಾಜ ದರ್ಬಾರು. ಕೆಲವು ಬಾರಿ ಅಡುಗೆ ಮಾಡುವ ಸಕಲ ಜವಾಬ್ದಾರಿಯನ್ನು ನಾನೇ ನಿರ್ವಹಿಸುವುದುಂಟು. ಖಂಡಿತಾ ರುಚಿಯಿದ್ದೀತು! ಏಕೆಂದರೆ, "ತುಟಿ ಪಿಟಕ್ಕೆನ್ನದೆ ಉಳಿದವರು ಊಟ ಮಾಡುತ್ತಿದ್ದರು". ಹೆಂಡತಿಯಂತೂ ನನ್ನ ರಜೆಯ ನಿಮಿತ್ತ ಅವಳಿಗೆ ಸಿಗುವ ಅಲ್ಪವಿರಾಮದ ಸಂತಸದಲ್ಲಿರುತ್ತಾಳೆ. ಮಗ ನನ್ನ ಬ್ಯಾಗ್ ಗೆ ಕೈಹಾಕಿ ತನ್ನ ಪಾಲಿನದ್ದೇನಿದ್ದೀತು ಎಂದು ತಡಕಾಡುತ್ತಾನೆ. ಏನೂ ಸಿಗದಿದ್ದರೆ, ಮತ್ತೆ ಬರುವುದು ಯಾವಾಗ ಎಂದು ವಿಚಾರಣೆಗೊಳಪಡಿಸಿ, ಬೇಡಿಕೆ ಮುಂದಿಡುತ್ತಾನೆ. ಅಷ್ಟರಲ್ಲೇ ನನ್ನ ಭಾನುವಾರ ಅರ್ಧ ಮುಗಿದು ಮರುಪ್ರಯಾಣದ ಚಿಂತೆಯಲ್ಲಿ ಮನೆಯವರು ಭಾಗಿ. ನಾನು ಮುಂದಿನ ರಜೆಯ ಗುಂಗಿನಲ್ಲಿರುತ್ತಿದ್ದೆ. "ನಿಧಾನವಾಗಿ ಬಂದು; ಬೇಗನೆ ಮುಗಿಯುವುದು" ಈ ರಜೆಯ ಹುಟ್ಟುಗುಣವೇನೋ ಎನ್ನಿಸುತ್ತದೆ. ಬಸ್ಸು ಮಡಿಕೇರಿ ಬಿಟ್ಟು ಮೈಸೂರು ಸೇರಿದ್ದೇ ತಡ; ತಲೆಯಲ್ಲಿ ಮತ್ತೆ ಕಛೇರಿ ತನ್ನಿಂದತಾನೆ ಮರುಸ್ಥಾಪನೆಗೊಳ್ಳುತ್ತದೆ.

## 6. ಬಿಡುವು ಸಿಕ್ಕಾಗ............

- *ದಿವಾಕರ. ಕೆ.*

ಅಯ್ಯೋ! ನನಗೆ ಪುರ್ರೊತ್ತೇ ಇಲ್ಲ. ಬರೀ ಕೆಲ್ಸ. ಆಫೀಸ್‌ನಲ್ಲೂ ಕೆಲ್ಸ, ಮನೇಲೂ ಕೆಲ್ಸ. ಬೆಳಿಗ್ಗೆ ಏಳು ಗಂಟೆಗೆ ಎದ್ದು ಹೊರಗಡೆ ಹೋದ್ರೆ ಮನೆ ಬಂದು ಸೇರೋದು ರಾತ್ರಿ ಏಳು ಗಂಟೆನೇ ಆಗಿಬಿಡುತ್ತೆ. ಒಂದು ದಿನ ಆರಾಮಾಗಿ ಎಲ್ಲಾದ್ರು ಹೋಗಿ ತಿರುಗಾಡಿಕೊಂಡು ಸ್ವಲ್ಪ ಬೇಜಾರು ಕಳ್ಕೊಂಡು ಬರೋಣ ಅಂದ್ರೆ ಅದು ಸಾಧ್ಯವಾಗ್ತಿಲ್ಲ. ಹೇಗೋ ಜೀವನ ಮಾಡಿಕೊಂಡು ಹೋಗೋದು, ಎಂದು ಅವರಿವರ ಕೈಯ್ಯಲ್ಲಿ, ಮನೆಯವರೊಂದಿಗೆ, ಗೆಳೆಯರೊಂದಿಗೆ ಹೇಳಿಕೊಂಡರೆ ಕೆಲವರು ತಮ್ಮತಮ್ಮಲ್ಲಿಯೇ ಗೊಣಗಿಕೊಳ್ಳುವವರು ಇದ್ದಾರೆ. ಯಾವುದೇ ವೃತ್ತಿಯಲ್ಲಿರುವವರಿಗೆ ಬಿಡುವು ಇಲ್ಲದಿದ್ದರೆ ಅದು ಅವರಿಗೆ ಸಂಕೋಲೆಯೇ ಆಗಿಬಿಡಬಹುದು. ಬಿಡುವು ಸಿಕ್ಕಿದರೆ ಏನಾದರೂ ಸಾಧಿಸಿ ಬಿಡುತ್ತಿದ್ದೆ ಎನ್ನುವವರು ಇದ್ದಾರೆ.

ರಜೆ ಇರದಿದ್ದರೂ ಸಿಕ್ಕ ಬಿಡುವನ್ನು ಹೇಗೆ ಸದುಪಯೋಗ ಮಾಡಿಕೊಳ್ಳಬೇಕು ಎಂಬುದನ್ನು ತೋರಿಸಿಕೊಟ್ಟವರು ನಮ್ಮೂರಿನ ರಾಜು. ಸಾಗರದ ಹತ್ತಿರದ ಸಮೀಪದ ತ್ಯಾಗರ್ತಿಯವರಾದ ರಾಜು ಬಡತನ ನಿಭಾಯಿಸಲು ಓದನ್ನು ಅರ್ಧಕ್ಕೆ ಮೊಟಕುಗೊಳಿಸಿ, ಹೊಟ್ಟೆಪಾಡಿಗಾಗಿ ಬಸ್ಸ್ ಚಾಲಕನಾಗಿ ಗಜಾನನ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಡ್ರೈವರ್ ಕೆಲಸ ಅಂದ್ರೆ ಗೊತ್ತಲ್ವೆ: ಎಷ್ಟು ಕಷ್ಟ ಅಂತ? ಅಪಾಯದ ಕೆಲಸ ಕೂಡ. ನಾವು ಅವರು ಬಾಲ್ಯದ ಗೆಳೆಯರಾದ್ದರಿಂದ ಈಗಲೂ ಹಬ್ಬಕ್ಕೆ ಊರಿಗೆ ಹೋದಾಗಲೆಲ್ಲಾ ಕಳೆದ ಬಾಲ್ಯದ ಹಳೆಯ ದಿನಗಳನ್ನು ನೆನಪಿಸಿ ಹರಟುತ್ತಿರುತ್ತೇವೆ. ಒಮ್ಮೊಮ್ಮೆ ವಾಹನ ಚಾಲನೆಯ ಬಗ್ಗೆಯು ಪ್ರಸ್ತಾಪ ಮಾಡಿ ನಮಗೆ ಪಾಠ ಹೇಳಿದ್ದುಂಟು.

ಒಂದು ಸಾರಿ ವಾಹನ ಚಾಲನೆ ಮಾಡುವಾಗ ಜನರಿಂದ ತುಂಬಿದ ಬಸ್ಸೊಂದನ್ನು ಮರಕ್ಕೆ ಢಿಕ್ಕಿ ಹೊಡೆಸಿ ದೊಡ್ಡ ಅಪಘಾತ ಮಾಡಿದ್ದನ್ನು ಆತ ಮಾತ್ರ ಮರೆತಂತೆ ಕಾಣುತ್ತಿಲ್ಲ. ಏಕೆಂದರೆ ಅಪಘಾತದಿಂದ ಬಹಳ ಜನರು ಗಾಯವಾಗಿ ಆಸ್ಪತ್ರೆ ಸೇರಿದ್ದನ್ನು ನೆನಪಿಸಿಕೊಂಡು, ನನ್ನಿಂದ ಹೀಗಾಯಿತಲ್ಲ, ಎಂದು ಹೇಳಿಕೊಳ್ಳುತ್ತಿರುತ್ತಾನೆ. ಆ ಅಪಘಾತದಿಂದ ಯಾರು ಸಾಯಲಿಲ್ಲ ಎಂಬುದೇ ಆತನಿಗೆ ಸಮಾಧಾನ.

ಈ ಘಟನೆಯಿಂದ ಬೇಸರಗೊಂಡ ರಾಜು ಆ ವೃತ್ತಿಯನ್ನೇ ತೊರೆಯಬೇಕೆಂದು ನಿರ್ಧರಿಸಿದ್ದನು. ಕೆಲಸದಲ್ಲಿ ಬಿಡುವು ಬೇರೆ ಇಲ್ಲ, ಎಂದು ಹೇಳಿಕೊಳ್ಳುತ್ತಿದ್ದನು. ಆದರೆ ಕೆಲಸ ಬಿಟ್ಟರೆ ಜೀವನ ಮಾಡುವುದೆಂತು? ಆತ ಅಷ್ಟು ಓದು ಬರಹ ಕಲಿತವನೂ ಆಗಿರಲಿಲ್ಲ. ಕೆಲಸ ಬಿಟ್ಟರೆ ಬದುಕು ಸಾಗಿಸುವುದಾದರೂ ಹೇಗೆ ಎಂಬುದು ಆತನಿಗೆ ಸದಾ ಕಾಡುತ್ತಿತ್ತು. ಅಪ್ಪನನ್ನು ಕಳೆದುಕೊಂಡ ಅವನು, ತಾಯಿಯನ್ನು ನೋಡಿಕೊಳ್ಳುವುದರ ಜೊತೆಗೆ ಇಬ್ಬರು ತಮ್ಮಂದಿರನ್ನು, ಒಬ್ಬಳು ತಂಗಿಯನ್ನು ಓದಿಸುವ ಜವಾಬ್ದಾರಿಯೂ ಇತ್ತು. ಪಿತ್ರಾರ್ಜಿತ ಆಸ್ತಿಯೇನೂ ಇರದಿದ್ದರಿಂದ ಚಾಲಕನಾಗಿ ಕೆಲಸ ಮಾಡಿ ಜೀವನ ನಡೆಸಬೇಕಾಗಿತ್ತು. ಆತನ ಓದು ಕೂಡ ಅರ್ಧಕ್ಕೆ ನಿಂತುಹೋಗಿದ್ದು ಸಹ ಇದೇ ಉದ್ದೇಶದಿಂದ, ಎಂದು ಅವನು ಆಗಾಗ ನೋವಿನಿಂದ ಹೇಳಿಕೊಳ್ಳುತ್ತಿರುತ್ತಾನೆ.

**"ಜೀವನದಲ್ಲಿ ಬಂದದ್ದೆಲ್ಲಾ ಬರಲಿ",** ಎಂಬ ಮಾತಿನಂತೆ ಯಾವುದಕ್ಕೂ ಹೆದರದೆ, ರಾಜು ತನ್ನ ವೃತ್ತಿ ಜೊತೆ ತನಗೆ ಬಿಡುವು ಸಿಕ್ಕಾಗ ಏನಾದರೂ ಮಾಡಲೇಬೇಕು ಎಂದು ನಿರ್ಧರಿಸಿದ್ದ. ಅದಕ್ಕಾಗಿ ಆತ ತನ್ನ ಸ್ನೇಹಿತರ ಹತ್ತಿರ ಸಾಲ ಮಾಡಿ ಯಾವ ಫಲವೂ ಬೆಳೆಯದ ಎರಡು ಎಕರೆ ಬಂಜರು ಭೂಮಿಯನ್ನು ಖರೀದಿಸಿದ್ದ. ಅದಕ್ಕೆ ಕೊಳವೆ ಬಾವಿ ಹಾಕಿಸಿ, ಬಾಳೆ, ಶುಂಠಿ, ಅನಾನಸ್, ಅಡಿಕೆ ಸಸಿ ಹಾಕಬೇಕೆಂದು ತೀರ್ಮಾನಿಸಿ, ಆ ಕೆಲಸ ಮಾಡಲು ಪ್ರಾರಂಭಿಸಿಯೇ ಬಿಟ್ಟ. ಆದರೆ ಕೆಲಸ ಮಾಡಲು ಸಮಯಬೇಕಲ್ಲವೇ? ಸಮಯ ಯಾರನ್ನೂ ಕಾಯುತ್ತ ಕೂರುವುದಿಲ್ಲ. ನಾವೇ ಸಮಯವನ್ನು ಹುಡುಕಿಕೊಂಡು ಸಾಗಬೇಕು. ಎಂದು ನಂಬಿದವನು ನಾನು ಎಂಬುದು ರಾಜುವಿನ ಅನಿಸಿಕೆ ಆಗಿತ್ತು. ಛಲ ಬಿಡಲಿಲ್ಲ, ಹಮ್ಮು ಬಿಮ್ಮು ಇರಲಿಲ್ಲ, ಬೇರೆಯವರ ಬಗ್ಗೆ ಸ್ವಾರ್ಥ ಇಲ್ಲದ ರಾಜು ಕಾಯಕವೇ ಕೈಲಾಸ ಎಂದು ತಿಳಿದು ಕೆಲಸ ಮಾಡಹತ್ತಿದ. ತಾನು ಬೆಳಗ್ಗಿನ ಜಾವ ನಾಲ್ಕು ಗಂಟೆಗೆ ಎದ್ದು ಹೊಲಕ್ಕೆ ಹೋಗಿ ಕೃಷಿ ಕೆಲಸ ಮುಗಿಸಿ ತನ್ನ ಚಾಲಕ ವೃತ್ತಿಗೆ ತೆರಳುತ್ತಿದ್ದ. ಎರಡು ವರ್ಷದ ಬಳಿಕ ಅವನು ಸಂಪೂರ್ಣವಾಗಿ ತೊಡಗಿಸಿಕೊಡಿದ್ದು ವ್ಯವಸಾಯದಲ್ಲಿಯೇ. ಅದರಲ್ಲಿ ಸಿಕ್ಕ ಸುಖ ಅಷ್ಟಿಷ್ಟಲ್ಲ. ಅದೇ ಅವನಿಗೆ ಸ್ವರ್ಗಸುಖ. ಇಂತಹ ಸುಖವನ್ನು ಪಡೆಯಲು ಸಾಧ್ಯವಾದದ್ದು ಅವನಿಗೆ ಸಿಕ್ಕ ಬಿಡುವನ್ನು ಸರಿಯಾಗಿ ಬಳಸಿಕೊಂಡಿದ್ದು ಎಂಬುದನ್ನು ಆತ ಮರೆತಿಲ್ಲ. ರಜೆಯ ಅವಧಿಯು ಆತನ ಬದುಕನ್ನೇ ಬದಲಾಯಿಸಿಬಿಟ್ಟಿತು ಅಷ್ಟೇ ಅಲ್ಲದೆ ಜೀವನದಲ್ಲಿ ಆತನಿಗೆ ನೆಮ್ಮದಿಯನ್ನು ನೀಡಿತು. ಇಂತಹವರು ನಮ್ಮ ನಡುವೆಯೇ ಇದ್ದಾರೆಂಬುದು ಸೋಜಿಗವಲ್ಲವೇ...?



## 7. Holiday

- ***B Ramadevi***

"***Holidays are about experiences and people, and tuning into what you feel like doing at that moment. Enjoy not having to look at a watch***."- By Evelyn Glennie

***"Holidays are all different depending on the company and time of your life***."- By Dominic Monaghan

As the quotes say, holidays are generally jolly days at all levels of life. A holiday for each has different degree of importance. Childhood holidays are for fun, adulthood holidays are for various preparations, holidays for the middle-aged working class are for resting and rejuvenating, holidays for the retired are for meeting their kith and kin. For me, being a working mother, a holiday is a rest from the routine of cooking, packing, getting ready to office but generally goes into meeting people and if some more time available then cleaning at leisure. Holiday is mostly an extended period of leisure and recreation or a break from the routine lap of the schedule. Every one waits for the holidays for the good, barring few unexpected holidays declared due to unrest/bandh, deaths etc, which are sudden in nature.

Also, mostly holidays are enjoyed more by those, who work hard as they bring a change for them rather than for those who waste their productive time. It is indeed true that life without holidays would become boring, making one lose all interest in studies and work.

Most of the holidays are attached to some religious festivities. In Indian traditions and customs, the holidays we observe are more tuned to group celebrations, meeting people, remembering good deeds and souls.

In our current lifestyle, holidays are to be enjoyed, to be relaxed, to be more to yourself and get refreshed after a long haul of tiring past days in terms of physical and mental state of mind. Not just being laid back, holidays are also meant for pursuing our hobbies and interests. During holidays we can live our life as we want. Always, the starting of the holiday is welcoming but the ending of the holiday is not so.

Thus, holidays are as important for our well-being as going to school for studies, going to office for work and sleeping



## 8. ಹುಡುಕಾಟ....... (ಶಿಬಿರ ಮುಗಿದ ಮೇಲೆ)

- ***ಸತ್ಯಸಾಕ್ಷಿ ತುಮರಿ***




ರಜಾ ದಿನ ಬಂತು ಅಂದ್ರೆ ಸಾಕು ಅದೆಂತಾ ಸಂತಸ?! ಅದೆಂತಾ ಸಂಭ್ರಮ ಎಲ್ಲರಲ್ಲೂ?! ನಾನೂ ಕೂಡಾ ಎಲ್ಲರಂತೆ ಬದುಕಿದವಳು, ಆದರೆ ನಾನು ಚಿಕ್ಕವಳಿದ್ದಾಗ ರಜೆಯ ದಿನ ಬಂದರೆ ಏನೋ ಒಂದು ತರಹದ ಭಯ, ಹೇಳಿಕೊಳ್ಳಲಾಗದ ಆತಂಕ ನನ್ನಲ್ಲಿ ಮನೆ ಮಾಡುತಿತ್ತು. ಅದಕ್ಕೆ ಕಾರಣ ನನ್ನನ್ನು ಬುದ್ಧಿವಂತಳನ್ನಾಗಿ ಮಾಡಲು ತವಕಿಸುವ ಶಿಬಿರಗಳು ನನ್ನ ಬಾಲ್ಯವನ್ನ, ನನ್ನ ರಜೆಯ ಸಂಭ್ರಮವನ್ನ ಕಿತ್ತುಕೊಳ್ಳುತ್ತಿದ್ದವು. ಹೌದು ನಾನು ವಿಜ್ಞಾನ, ಗಣಿತ, ಇಂಗ್ಲೀಷ್, ಹಿಂದಿ, ವಿಷಯಗಳ ಆದಿಯಾಗಿ ಎಲ್ಲಾ ಕಲಿಕಾ ವಿಷಯಗಳಲ್ಲೂ ದಡ್ಡಿಯಾಗಿದ್ದೆ. 100 ಅಂಕಗಳಿಗೆ 5 ಅಂಕ ದಾಟಿದ ವಿಷಯ ಅಂದರೆ ಅದು ಕನ್ನಡ ಮಾತ್ರ. ಉಳಿದೆಲ್ಲವೂ 1, 2, 3.......... ಪಾಪ ನನ್ನ ಅಪ್ಪ ಅಮ್ಮ ನನ್ನ ಬಗ್ಗೆ ಅದೆಷ್ಟು ಆಸೆಗಳನ್ನು ಇಟ್ಟುಕೊಂಡಿದ್ದರೋ ನಾನರಿಯೆ. ಪ್ರತಿ ದಿನ ಶಾಲೆಯಿಂದ ಬರುತ್ತಿದ್ದ ನನ್ನ ಬಗೆಗಿನ ಸುದ್ದಿಗಳು ಅವರನ್ನು ನೋಯಿಸುತ್ತಿದ್ದದ್ದು ಮಾತ್ರ ನೂರಕ್ಕೆ ನೂರರಷ್ಟು ಸತ್ಯ. 'ನಿಮ್ಮ ಮಗಳಿಗೆ ಏನೂ ಓದಲು ಬರುವುದಿಲ್ಲ, ಹೀಗೇ ಆದರೆ ಆಕೆ ನಪಾಸು ಆಗುತ್ತಾಳೆ.' ಎಂಬ ಮಾತುಗಳು ನನ್ನ ತಾಯಿಗೆ ಕೋಪ ತರಿಸುತ್ತಿತ್ತು. ಆಕೆ ಕೋಪವನ್ನು ಹಿಡಿದಿಟ್ಟುಕೊಳ್ಳುವ ಜಾಯಮಾನದವಳಲ್ಲ, ಬದಲಿಗೆ ಅಪ್ಪಾಜಿಯ ಬೆಲ್ಟು, ದಾಸವಾಳದ ಗಿಡದ ಕೋಲು, ಹೆಗ್ಗಣ ಹೊಡೆಯಲು ಅಪ್ಪಾಜಿ ಇಟ್ಟುಕೊಂಡಿದ್ದ ದಪ್ಪನೆಯ ದೊಣ್ಣೆಗಳು ಅಮ್ಮನ ಕೈಗೆ ಸಿಕ್ಕು ನನ್ನ ದೇಹವನ್ನು ಸರದಿ ಪ್ರಕಾರ ಒಂದಾದ ಮೇಲೊಂದರಂತೆ ಆವರಿಸುತಿದ್ದವು. ನನ್ನ ಎಳೆಯ ಮೈಮೇಲೆ ಕೆಂಪಾಗಿ ಕಾಣುವ ಅವುಗಳ ಗುರುತುಗಳು ನಿಧಾನವಾಗಿ ನನಗರಿವಿಲ್ಲದಂತೆ ನನ್ನ ಕಣ್ಣುಗಳಲ್ಲಿ ಧಾರಾಕಾರವಾಗಿ ನೀರನ್ನು ಸುರಿಯುವಂತೆ ಮಾಡುತ್ತಿದ್ದವು. ಇಷ್ಟೆಲ್ಲ ಇರುವಾಗ ನನ್ನನ್ನು ಬುದ್ಧಿವಂತಳನ್ನಾಗಿ ಮಾಡುವುದು ಒಂದು ದೊಡ್ಡ ಸಾಹಸವೇ ಆಗಿತ್ತು ಅಪ್ಪಾಜಿ ಅಮ್ಮನ ಪಾಲಿಗೆ. ಹೀಗಿರುವಾಗ ಅದಕ್ಕಾಗಿ ಅವರು ದಾರಿ ಹುಡುಕುತ್ತಿದ್ದರು. ಒಂದು ದಿನ ಅದ್ಯಾವ ಪುಣ್ಯಾತ್ಮ ಸಿಕ್ಕಿದನೋ ಅವರಿಗೆ......??? ನನ್ನ ಆಸಕ್ತಿ ಸಾಯಿಸುವ ದಾರಿಯೊಂದನ್ನು ಅವರಿಗೆ ಅವ ತಿಳಿಸಿಕೊಟ್ಟಿದ್ದ. ರಜೆಯ ಶಿಬಿರಗಳೆಂಬ ನರಕದ ಬಾಗಿಲು ನನಗಾಗಿ ಅಂದಿನಿಂದ ತೆರೆದುಕೊಂಡಿತ್ತು.

ರಜಾ ದಿನದ ಶಿಬಿರಗಳು ನನ್ನ ಆಸಕ್ತಿಗೆ ವಿರುದ್ಧವಾಗಿದ್ದವು, ಅದು ಸಂಸ್ಕೃತ, ವಿಜ್ಞಾನ, ಮತ್ತು ಇಂಗ್ಲೀಷ್ ಕಲಿಸುವ ನಾಲ್ಕು ಗೋಡೆಗೆ ನನ್ನನ್ನು ಮೀಸಲಿರಿಸುವ, ಕಟ್ಟಿಹಾಕುವ, ಬಂದಿಯಾಗಿಸುವ ಬಂದೀಖಾನೆಗಳೆಂಬಂತೆ ನನಗೆ ಅನ್ನಿಸತೊಡಗಿತ್ತು. ಆದರೆ ಅದನ್ನು ಧಿಕ್ಕರಿಸುವ ಯಾವ ಧೈರ್ಯವೂ ನನಗಿರಲಿಲ್ಲ. ಅಂದಿನಿಂದ ನನ್ನ ಮನಸ್ಸಿನಲ್ಲಿ ನಾನು ದಡ್ಡಿ ಎಂಬ ಭಾವನೆ ಆಳವಾಗಿ ಬೇರೂರಲಾರಂಭಿಸಿತು.

ಇಷ್ಟೆಲ್ಲ ನಡೀತಿರುವಾಗಲೇ ಆಟದ ಮೇಲಿನ ನನ್ನ ಆಸಕ್ತಿ ಹೊರಟುಹೋಗಿತ್ತು. ನಾನು ಕೂಪಮಂಡೂಕದ ರೀತಿಯಾಗಿದ್ದೆ. ನನಗೆ ಆಸಕ್ತಿ ಇಲ್ಲದೇ ಇದ್ದರೂ ರಜಾದಿನದ ಶಿಬಿರವೇ ನನ್ನ ಆಟದ ಮೈದಾನವಾಗಿತ್ತು. ಮೊದಲೆಲ್ಲ ರಜೆಯಲ್ಲಿ ಅಕ್ಕಂದಿರೊಂದಿಗೆ ಸೇರಿ ಚಿಕ್ಕು ಹಣ್ಣು ಕದಿಯಲು ಹೋಗುತ್ತಿದ್ದ ನಾನು ಈಗ ಒಂದು ಪುಸ್ತಕ ಪೆನ್ನು ಹಿಡಿದು ನನ್ನನ್ನು ಬುದ್ಧಿವಂತಳನ್ನಾಗಿ ಮಾಡುವ ಸಂಕಲ್ಪ ಹೊತ್ತ ಶಿಬಿರದೆಡೆ ನಡೆಯುತ್ತಿದ್ದೆ.

ಶಿಬಿರ ಮುಗಿದ ಮೇಲೆ, ಅಥವಾ ಶಿಬಿರ ಇಲ್ಲದ ದಿನ ನಾನು ಅಕ್ಕಂದಿರೊಂದಿಗೆ ಕಣ್ಣಾಮುಚ್ಚಾಲೆ ಆಟ ಆಡುತ್ತಿದ್ದೆ. ಯಾರೋ ಒಬ್ಬರು ನನ್ನ ಕಣ್ಣು ಕಟ್ಟುತ್ತಿದ್ದರು, ಕಣ್ಣು ಬಿಟ್ಟಾಗ ನಾನು ಅಕ್ಕಂದಿರನ್ನು ಹುಡುಕುತ್ತ ಮನೆ ತುಂಬ ಅಲೆದಾಡುತಿದ್ದೆ. ಎಲ್ಲೆಲ್ಲಿ ಅಲೆದಾಡುತಿದ್ದೆ ಎಂದರೆ ಬಚ್ಚಲು, ಕೊಟ್ಟಿಗೆ, ಮೆತ್ತು, ಕೋಣೆಗಳು ಅಷ್ಟೆ ಅಲ್ಲ, ಅಜ್ಜಿ ಶೌಚ ಮಾಡುತ್ತಿದ್ದ ಬಾಗಿಲು ಭದ್ರ ಇಲ್ಲದ ಶೌಚಾಲಯ, ಶೌಚಾಲಯದ ಬಾಗಿಲು ತೆರೆದದ್ದು ಗೊತ್ತಾದ ಅಜ್ಜಿ ಶೌಚ ಮುಗಿಸಿ ಬಂದು ನನಗೆ ಹೊಡೆದ ನೆನಪು ನನ್ನಿಂದ ಮರಿಲಿಕ್ಕಾಗುತ್ತಿಲ್ಲ. ಎಲ್ಲಿಯೂ ಅಕ್ಕಂದಿರು ನನಗೆ ಸಿಗದೇ ಇದ್ದಾಗ ಮತ್ತೆ ವಾಪಸು ಬಂದು ನನ್ನ ಕಣ್ಣು ಕಟ್ಟಿದವರ ಬಳಿ ಬರುತಿದ್ದೆ. ಆದರೆ...ಅಕ್ಕಂದಿರೂ ಇಲ್ಲ, ನನ್ನ ಕಣ್ಣು ಕಟ್ಟಿದವರೂ ಇಲ್ಲ. ನನಗೆ ಅವರ್‍ಯಾರೂ ಸಿಗುತ್ತಿರಲಿಲ್ಲ, ಅವರೆಲ್ಲ ನನ್ನನ್ನು ಒಬ್ಬಳನ್ನೇ ಬಿಟ್ಟು ಗುಡ್ಡ ಬೆಟ್ಟ ಸುತ್ತಲು ಹೋಗುತ್ತಿದ್ದರು. ನಾನು ಅವರಿಗಾಗಿ ಹಂಬಲಿಸುತ್ತಿದ್ದೆ ಕಣ್ಣೀರು ಹಾಕುತ್ತಿದ್ದೆ. ನನ್ನನ್ನು ಸಮಾಧಾನ ಮಾಡುವವರು ಯಾರೂ ಅಂದು ನನ್ನ ಜೊತೆ ಇರುತ್ತಿರಲಿಲ್ಲ.

ಹು......! ಇಂದು ಹಳೆಯ ಶಿಬಿರ ಮುಗಿದಿದೆ, ಆದರೆ ನನ್ನ ಮನಸ್ಸಿನಲ್ಲಿ ನಾನೇ ಒಂದು ಶಿಭಿರ ಮಾಡಿಕೊಂಡಿದ್ದೇನೆ. ನನಗೆ ಏನು ಕಲೀಬೇಕು ಅನಿಸುತ್ತದೆಯೋ ಅದನ್ನು ನಾನೇ ಸ್ವತಃ ಕಲಿಯುವ ಕೆಲಸ ಮಾಡುತ್ತೇನೆ. ಅದರ ಜೊತೆ ನಾನು ಒಬ್ಬಳೇ ಕಣ್ಣಾಮುಚ್ಚಾಲೆ ಆಟವನ್ನು ಆಡುತ್ತೇನೆ. ನನಗೆ ಅಂದು ಯಾರೋ ಕಣ್ಣು ಕಟ್ಟಿದ್ದರೆ ಇಂದು ನನ್ನ ಕಣ್ಣನ್ನು ನಾನೇ ಕಟ್ಟಿಕೊಂಡಿದ್ದೇನೆ. ಬೇರೆ ಯಾರನ್ನೂ ಹುಡುಕುತ್ತಿಲ್ಲ, ಬದಲಿಗೆ ಇನ್ನೆಂದೂ ಸಿಗದ ನನ್ನವನನ್ನ, ನನ್ನೊಳಗೆ ಮನೆ ಮಾಡಿ ಹೇಳದೇ ಕೇಳದೇ ಹೊರಟುಹೋದ ನನ್ನವನನ್ನ ಹುಡುಕಹೊರಟಿದ್ದೇನೆ.....



## 9. ರಜೆಯ ಮಜಾ ನೆನಪುಗಳು

- ***ಷಡಕ್ಷರಿ ತರಬೇನಹಳ್ಳಿ***

ರಜೆಯೆಂದರೆ ನನಗೆ ನೆನಪಾಗುವುದು ನನ್ನ ಬಾಲ್ಯದ ಪ್ರಾಥಮಿಕ ಶಿಕ್ಷಣದ ದಿನಗಳು. ದಸರಾ ರಜೆ ಮತ್ತು ಬೇಸಿಗೆ ರಜೆ ನನ್ನ ಪ್ರಾಥಮಿಕ ಶಿಕ್ಷಣದ ಜೀವನದ ರಸಮಯ ದಿನಗಳು. ದಸರಾ ರಜೆ ಬಂತೆಂದರೆ ಮೈಸೂರಿನಲ್ಲಿದ್ದ ನನ್ನ ಸೋದರಮಾವಂದಿರ ಮನೆಗಳಿಗೆ ಹೋಗುವ ತಯಾರಿಯಾಗುತ್ತಿತ್ತು. ಬೇಸಿಗೆ ರಜೆಯಲ್ಲಿ ಮಾತ್ರಾ ನನ್ನ ಹುಟ್ಟೂರು ಅಥವಾ ಅಮ್ಮನ ತವರು ಮನೆಯಲ್ಲಿ ಕಳೆಯುತ್ತಿದ್ದೆವು. ದಸರಾ ರಜೆಗೆ ಮೈಸೂರಿಗೆ ಮನೆಯ ಹಿರಿಯರೊಂದಿಗೆ ಹೋದರೆ, ನಮಗೆ ದಸರಾ ದರ್ಬಾರಿನ ಪ್ರತಿದಿನದ ಸಂಗೀತ ಕಛೇರಿಯ ಸವಿಗಾಯನ ಸವಿಯುವ ಸೌಭಾಗ್ಯವಿತ್ತು. ನನ್ನ ಒಬ್ಬ ಸೋದರಮಾವ ಪೋಲೀಸ್ ಇಲಾಖೆಯ ಹುದ್ದೆಯಲ್ಲಿದ್ದರ ಪ್ರಯುಕ್ತ ಅವರ ಸಹೋದ್ಯೋಗಿಗಳೊಂದಿಗೆ ಕುಟುಂಬದ ಸದಸ್ಯರೂ ಕೂಡ ಈ ದರ್ಬಾರಿನ ವಿಶೇಷ ಕಾರ್ಯಕ್ರಮಗಳನ್ನು ನೋಡುವ ಅವಕಾಶವಿರುತ್ತಿತ್ತು. ಅಲ್ಲದೇ ಮುಂದಿನ ಸಾಲಿನ ಕುರ್ಚಿಗಳಲ್ಲಿ ಕುಳಿತು ಕೆಲವು ಮಾರುಗಳ ದೂರದಲ್ಲಿ ಕಣ್ಣಮುಂದೆ ಅಂಬಾರಿ ಹೊತ್ತು ಸಾಗುವ ದಸರಾ ಆನೆಗಳ ಸಾಲು ನೋಡಿದ ನೆನಪು ಇನ್ನೂ ಅಚ್ಚಳಿಯದಂತಿದೆ.

ರಾತ್ರಿ ಬನ್ನಿ ಮಂಟಪದಲ್ಲಿ ನಡೆಯುವ ಪಂಜಿನ ಕವಾಯತು ಇನ್ನೂ ಕಣ್ಣಮುಂದೆ ನಡೆಯುತ್ತಿರುವಂತಿದೆ. ನಮ್ಮ ಮೈಸೂರಿನ ಮನೆಮುಂದೆ ಇದ್ದ ಚೌಕಿಯಲ್ಲಿ ಯಾವಾಗಲೂ ಓಡಲು ಸಿದ್ಧವಾಗಿ ನಿಂತಿರುತ್ತಿದ್ದ ಕುದುರೆಮೇಲೆ ಕುಳಿತ ಪೋಲೀಸಪ್ಪನ ಚಿತ್ರ ಇನ್ನೂ ಮಾಸಿಲ್ಲ. ಜೊತೆ ಜೊತೆಗೆ ಮೈಸೂರಿನ ಸುತ್ತಮುತ್ತ ಇದ್ದ ಚಾಮುಂಡಿಬೆಟ್ಟ, ಶ್ರೀರಂಗಪಟ್ಟಣ, ರಂಗನತಿಟ್ಟು, ನಂಜನಗೂಡಿನ, ಬಲಮುರಿ ಪಾಲ್ಸಿನ, ಬಂಡೀಪುರ,ನಾಗರಹೊಳೆ ಅಭಯಾರಣ್ಯಗಳಲ್ಲಿ ಕುಟುಂಬಸಮೇತರಾಗಿ ಸಂಚರಿಸಿದ ನೆನಪುಗಳು ಹಚ್ಚಹಸಿರಾಗಿವೆ. ರಾತ್ರಿ ಸಮಯ ಇಡೀ ಮೈಸೂರು ಅರಮನೆಯೊಂದಿಗೆ ಬೆಳಗುವ ದೀಪಗಳಿಂದ ಅಲಂಕೃತಗೊಂಡು ಜಗಮಗಿಸುತ್ತಿದ್ದುದು ಇನ್ನೂ ನನಗೆ ತೀರದ ಅಚ್ಚರಿಯಾಗಿದೆ. ಅಲ್ಲಿಯ ವಸ್ತು ಪ್ರದರ್ಶನ, ಕುಸ್ತಿ ಕಾಳಗಗಳು, ಆಟೋಟಗಳು, ಸಾರೋಟಿನಲ್ಲಿ ಕುಳಿತು ಸುತ್ತಾಡಿದ, ಗಿಜಿಗುಡುವ ರಸ್ತೆಗಳಲ್ಲಿ ಮಕ್ಕಳೆಲ್ಲ ಹಿರಿಯರ ಕೈಹಿಡಿದು ನಡೆದಾಡಿದ ನೆನಪುಗಳು ಮಾಸದೆ ಉಳಿದಿವೆ. ಅಕ್ಕಂದಿರು ಅಣ್ಣಂದಿರು ಹಿರಿಯರೊಡಗೂಡಿ ಪ್ರತೀ ದಿನಕ್ಕೊಂದು ಸ್ಥಳದಂತೆ ಸುತ್ತಾಡುತ್ತಾ ಇದ್ದ ರಜವೆಲ್ಲಾ ಮುಗಿದದ್ದು ಗೊತ್ತಾಗುವುದರೊಳಗೆ ಮರಳಿ ಮನೆಸೇರಿ ಅಳಿದುಳಿದ ಗೃಹಕಾರ್ಯಗಳನ್ನು ಮುಗಿಸಿಕೊಂಡು ಮತ್ತೆ ಪ್ರಾರಂಭವಾಗುವ ಶಾಲೆಗೆ ಹೊರಡಲು ತಯಾರಾಗುತ್ತಿದ್ದುದು ಇಂದು ನನ್ನ ಮುಂದಿನ ಮಕ್ಕಳ ಲಗುಬುಗೆಯ ತಯಾರಿ ನೋಡಿ ನಗು ಬರುತ್ತದೆ.



ನಾನು ತುಂಬಾ ಆಸೆಯಿಂದ ಕಾಯುತ್ತಿದ್ದುದು ಬೇಸಿಗೆ ರಜಕ್ಕಾಗಿ. ಸುಡುವ ಬಿಸಿಲು ನನಗೊಂದು ಕಾಟವೆನಿಸುತ್ತಿರಲಿಲ್ಲ. ಅಮ್ಮನ ತವರು ಮನೆಯ ನನ್ನ ಸಮಾನವಯಸ್ಕ ಗೆಳೆಯರೊಂದಿಗೆ ಕಳೆದ ಕಾಲವೊಂದು ವಜ್ರದ ಗಣಿಯಂತೆ. ಬೆಳಗ್ಗೆ ಬೆಳಗ್ಗೆ ಎಲ್ಲರೂ ತಿಂಡಿ ತಿಂದು ಅಂದಿನ ಯೋಜನೆಯ ಬಗ್ಗೆ ಎಲರ್ಲೂ ಒಟ್ಟು ಸೇರಿ ಚರ್ಚಿಸುತ್ತಿದ್ದೆವು. ಅದರಂತೆ ಯಾರು ಯಾರು ಏನೇನು ತರಬೇಕು ಮತ್ತು ಎಲ್ಲೆಲ್ಲಿ ಏನೇನು ಹೊಂದಿಸಿಕೊಳ್ಳಬೇಕು ಎಂದು ಮೊದಲೇ ತೀರ್ಮಾನಿಸುತ್ತಿದ್ದೆವು. ಅದರಂತೆ ಚಾಚೂ ತಪ್ಪದೇ ನಡೆಯುತ್ತಿದ್ದೆವು. ಇಷ್ಟೆಲ್ಲ ತಯಾರಿ ಯಾಕೆಂದರೆ ಇವೆಲ್ಲ ನಮ್ಮ ನಮ್ಮ ಮನೆಯವರಿಗೆ ಗೊತ್ತಿಲ್ಲದೆ ನಡೆಸಲ್ಪಡುತ್ತಿದ್ದವು. ಎಲ್ಲರೂ ಅವರವರ ಮನೆಯವರಿಗೆ ಏನೇನೋ ಸಬೂಬು ಹೇಳಿ ಜಾಗ ಖಾಲಿಮಾಡಿ ನಮ್ಮ ತಂಡ ಸೇರಲು ಧಾವಿಸುತ್ತಿದ್ದರು. ಒಬ್ಬರು ಬನೀನಿನ ಒಳಗೆ ಅಕ್ಕಿ / ರಾಗಿ ರೊಟ್ಟಿ ತಂದಿದ್ದರೆ ಮತ್ತೊಬ್ಬರು ಬೆಲ್ಲದ ಉಂಡೆಗಳು, ಉಪ್ಪು ಖಾರದ ಪುಡಿಯೊಂದಿಗೆ ಬಂದಿರುತ್ತಿದ್ದರು. ಮತ್ತೊಬ್ಬ ಚಾಕುವಿನೊಂದಿಗೆ ಬಂದರೆ ಮತ್ತೊಬ್ಬ ಹಗ್ಗ ಮಗದೊಬ್ಬ ಕಾಫಿ ಕಾಯಿಸಲು ಬೇಕಾಗುವ ದಬರಿಯೊಂದಿಗೆ ಬಂದಿರುತ್ತಿದ್ದ.

ಎಲ್ಲರೂ ಗುಡ್ಡದ ದಾರಿಹಿಡಿಯುತ್ತಿದ್ದೆವು. ದಾರಿಯಲ್ಲಿ ಮೊದಲು ಸಿಗುವ ಗೆಳೆಯನ ತೋಟದಲ್ಲಿ ಎಳನೀರು ಕುಡಿಯುವುದರೊಂದಿಗೆ ಪ್ರಾರಂಭವಾಗುತ್ತಿದ್ದ ನಮ್ಮ ಪಯಣ ದಿಕ್ಕು ದೆಸೆಯಿಲ್ಲದೆ ಮುಂದುವರೆಯುತ್ತಿತ್ತು. ದಾರಿಯುದ್ದಕ್ಕೂ ಸಿಕ್ಕುವ ಹಲವಾರು ಕಾಡಿನ ಹಣ್ಣಿನ ಮರಗಳು ನಮ್ಮ ದಾಳಿಗೆ ತುತ್ತಾಗುತ್ತಿದ್ದವು. ಅಲ್ಲೇ ಅದರ ನೆರಳಲ್ಲೇ ಕುಳಿತು ಅದರ ಕಾಯಿ ತಿಂದು ಅಲ್ಲೇ ಪಕ್ಕದಲ್ಲಿ ಹರಿಯುತ್ತಿದ್ದ ನೀರಿನ ತೊರೆಗಳಿಗೆ ಇಳಿದು ನೀರು ಕುಡಿದು ದಣಿವಾರಿಸಿಕೊಳ್ಳುತ್ತಿದ್ದೆವು. ಬೇಸಿಗೆಯ ಬಿಸಿಲಿಗೆ ನೀರು ಬತ್ತಿ ಕಡಿಮೆಯಾಗಿದ್ದ ಕಟ್ಟೆಗಳಿಗೆ ಇಳಿದು ಈಜಾಡಿ ಕೆಸರಲ್ಲಿ ಬಿದ್ದು ಗಲೀಜುಮಾಡಿಕೊಂಡು ಮತ್ತೆ ಬಟ್ಟೆ ಮಡಿಮಾಡಿಕೊಂಡು ಮುಂದುವರಿಯುತ್ತಿದ್ದೆವು.


ದಾರಿಯಲ್ಲಿ ಸಿಕ್ಕಿದ ಪೊದೆಗಳಲ್ಲಿ ಕಂಡ ಜೇನು ಕೀಳುವುದು ಮತ್ತು ಎಲ್ಲರೂ ಎಲೆಗಳ ಮೇಲೆ ಅದರ ತುಪ್ಪ ಹಾಕಿಕೊಂಡು ನೆಕ್ಕುತ್ತಿದ್ದುದು ಈಗ ನೆನಪಿಸಿಕೊಂಡರೂ ಬಾಯಲ್ಲಿ ನೀರೂರಿಸುತ್ತದೆ. ಯಾರದೋ ಗೆಳೆಯನ ತೋಟದಲ್ಲಿ ಬಿದ್ದಿದ್ದ ತೆಂಗಿನ ಕಾಯಿ ಸುಲಿಯಲು ಕುಡುಗೋಲಿಲ್ಲದೇ ನಮ್ಮ ಸಂಗಡಿಗನಾದ ಉಮೇಶ ಬರೀ ಹಲ್ಲು ಬಳಸಿ ಆ ಕಾಯಿ ಸುಲಿದಿದ್ದು ನನಗಿನ್ನೂ ನೆನಪಿದೆ. ನಂತರ ಆ ತೆಂಗಿನ ಕಾಯಿಯನ್ನು ಮರಳಿನಲ್ಲಿ ಮುಚ್ಚಿ ಅದರ ಮೇಲೆ ಬೆಂಕಿಹಾಕಿ ಸುಟ್ಟುತಿಂದ ನೆನಪು ಬೆಚ್ಚಗೆ ಸುಡುತ್ತಲಿದೆ. ಕಾಡಿನ ದಾರಿಯಲಿ ಅಡ್ಡಬಂದ ಮೊಲ, ಕಾಡಂದಿ, ಕಾಡುಕೋಳಿ, ಕಾಡು ಬೆಕ್ಕು, ನರಿ, ತೋಳಗಳನ್ನು ಎಲ್ಲರೂ ಹಿಡಿಯುವ ಹುಮ್ಮಸ್ಸಿನಿಂದ ಬೆನ್ನತ್ತಿ ಸ್ವಲ್ಪ ದೂರ ಓಡಿ ಸುಸ್ತಾಗಿ ನೆರಳು ಹುಡುಕಿ ಕುಳಿತ ನೆನಪು ಇಂದೂ ನಗೆಯುಕ್ಕಿಸುತ್ತದೆ. ಮದ್ಯಾಹ್ನದ ಸಮಯಕ್ಕೆ ಎಲ್ಲರೂ ಸೇರಿ ಒಟ್ಟಿಗೆ ಕುಳಿತು ಬಚ್ಚಿಟ್ಟು ತಂದಿದ್ದ ಎಲ್ಲ ರೊಟ್ಟಿ ಬೆಲ್ಲ ಕಾಯಿ ಹಣ್ಣು ಹಂಚಿ ತಿಂದು ಹೊಟ್ಟೆತುಂಬಾ ನೀರು ಕುಡಿದು ಮರದ ನೆರಳಿನಲ್ಲಿ ತೆಂಗಿನ ಗರಿಗಳ ಮೇಲೆ ಮಲಗುತ್ತಿದ್ದ ನೆನಪು ಸ್ವರ್ಗಕ್ಕೆ ಕಿಚ್ಚು ಹಚ್ಚುವಂತಿತ್ತು. ಮತ್ತೆ ಎಲ್ಲರೂ ಎಚ್ಚರಗೊಂಡು ಅಲ್ಲೇ ಗುಡ್ಡದಲ್ಲಿ ಮೇಯುತ್ತಿದ್ದ ಕರುಹಾಕಿದ ಹಸುಗಳನ್ನೋ ಎಮ್ಮೆಗಳನ್ನೋ ಹಿಡಿದು ಹಾಲು ಕರೆದು ಅಲ್ಲೇ ಒಲೆ ಮಾಡಿ ಕಾಫಿ ಕಾಯಿಸಿಕೊಂಡು ಕುಡಿದ ನೆನಪು ಇಂದಿನ ಕೆಫೆ ಕಾಫಿಡೇ ಮುಂದೆ ನಡೆದುಹೋಗುವಾಗಲೂ ಪಕ್ಕನೇ ನೆನಪಾಗುತ್ತದೆ.

ಸಂಜೆ ಸೂರ್ಯ ಕೆಂಪಾಗುವುದರೊಳಗೆ ಮನೆಯ ದಾರಿ ಹಿಡಿಯುತ್ತಿದ್ದ ನಮಗೆ ನಮ್ಮ ನಮ್ಮ ಮನೆಗಳಲ್ಲಿ ಎಲ್ಲರಿಗೂ ಭರ್ಜರಿ ಸ್ವಾಗತ ಕಾದಿರುತ್ತಿತ್ತು. ಬೆಳಗಿನಿಂದ ಕಣ್ಮರೆಯಾಗಿದ್ದ ನಮ್ಮಗಳ ಬರುವಿಕೆಗಾಗಿಯೇ ಕಾದಿದ್ದ ಅಮ್ಮಂದಿರು ಅಕ್ಕಂದಿರು ಅಣ್ಣಂದಿರು ಅಪ್ಪಂದಿರು ಅವರವರಿಗೆ ಖುಷಿಯಾಗುವ ಆಯುಧಗಳೊಂದಿಗೆ ನಮ್ಮನ್ನು ಎದುರುಗೊಳ್ಳುತ್ತಿದ್ದರು. ನಾವು ಅವರ ಬಾರಿಸುವ ಕಲೆಯ ಎಲ್ಲ ಚಳಕಗಳನ್ನೂ ಅರಿತವರಂತೆ ಒದೆ ತಿಂದಂತೆ ನಟಿಸುತ್ತಲೂ ತಪ್ಪಿಸಿಕೊಳ್ಳುತ್ತಲೂ ನಮ್ಮ ಅಜ್ಜ ಅಜ್ಜಿಯಂದಿರ ಹಿಂದೆ ಹೋಗಿ ಬಚ್ಚಿಟ್ಟುಕೊಳ್ಳುತ್ತಿದ್ದುದು ಇನ್ನೂ ಕಾಯಲಿಟ್ಟ ಹಾಲಿನಂತೆ ಉಕ್ಕಿ ಉಕ್ಕಿ ಬರುತ್ತಿದೆ.

## 10. ಖಾಲಿ ಡಬ್ಬಾ

- *ಲೋಹಿತ್ ಚಾಮನೂರ್.*

ಮನೆಗೆ ದಣಿದು ನಾ ಬಂದಾಗ
ತಣ್ಣನದೇನಾದರು ತಾ ಎಂದಾಗ,
ಮಾಡಿ ಕೊಟ್ಟಳಾಕೆ ಶರಬತ್ತ
ನನದಾಯಿತಾಗ ಮನ ಶಾಂತಚಿತ್ತ.
ನಂತರ ನಾ ಹಿಡಿದೆ ಒಕ್ಕಣಿಕೆ
ಅವಳಿಡಿದಳು ಲಟ್ಟಣಿಕೆ,
ನಾ ಮಾಡಿದೆ ಕಾಪಿ ಮಸಿ
ಅವಳು ಮಾಡಿದಳು ಹಿಟ್ಟು ಹಸಿ.
ನಾನು ತೀಡುತಿದ್ದೆ ಅಕ್ಷರ ಮಾಲೆ
ಅವಳು ತೀಡುತಿದ್ದಳು ಖಣಕದ ಓಲೆ,
ನನ್ನದಾಗಿತ್ತು ಕವಿತೆ
ಅವಳದಾಗಿತ್ತು ಚಪಾತಿ.
ನಾನಿದನ್ನೊಯ್ದಿದ್ದೆ ಕವಿ ಸಮ್ಮೆಳನಕ್ಕೆ
ಅವಳದನ್ನೊಯ್ದಿದ್ದಳು ಮಹಿಳಾಸಮ್ಮೇಳನಕ್ಕೆ,
ನನ್ನ ಗೆಳೆಯರಿಲ್ಲಿ ಓದಿ ಉಬ್ಬಿದ್ದರು
ಅವಳ ಗೆಳತಿಯರಲ್ಲಿ ತಿಂದು ತೇಗಿದ್ದರು.
ಮನೆಗೆ ನಾನು ತಂದಿದ್ದೆ ಪುರಸ್ಕಾರದ ಡಬ್ಬಾ
ಅವಳು ತಂದಿದ್ದಳು ಚಪಾತಿಯ ಖಾಲಿ ಡಬ್ಬಾ.



## 11. ರಜಾ ದಿನದ ಕುರಿತು.......

- *ಶೌರೀಶ್ ಕುದ್ಕುಳಿ*

ಮಗುವಾಗಿದ್ದಾಗ ಮತ್ತು ನಂತರದಲ್ಲಿ ಮಕ್ಕಳು ಎಂದು 'ಕರೆಸಿಕೊಳ್ಳುವ' ಹಂತದಲ್ಲಿ ರಜೆ ಎನ್ನುವುದು ಮಜಾ ಆಗಿತ್ತು. ಅಂದರೆ ಸಂತೋಷವನ್ನು ನೀಡುವ ದಿನವಾಗಿತ್ತು. ಆ ದಿನಗಳನ್ನು ಅನುಭವಿಸುವ ಪೂರ್ವದಲ್ಲಿ, ಮಾನಸಿಕವಾಗಿ ಹೊರಹೊಮ್ಮುತ್ತಿದ್ದ ಖುಷಿಯು, ಪ್ರಾಯಶಃ ಬೆಟ್ಟದಷ್ಟಿದ್ದು, ಬೆಲೆ ಕಟ್ಟಲಾಗದ ಆನಂದವಾಗಿತ್ತು. ಇದಕ್ಕೆ ಕಾರಣಗಳು ಹಲವಾರು. ಎಳವೆಯ ಆಟಗಳು ಹೆಚ್ಚು ಆಕರ್ಷಣೀಯವಾಗಿದ್ದು, ಬಾಹ್ಯದಿಂದ ಬರತಕ್ಕಂತಹ ಒತ್ತಡ, ಜವಾಬ್ದಾರಿಗಳಿಗೆ ಒಗ್ಗಿಕೊಳ್ಳುವುದು ಬೇಕಾಗಿರುವುದಿಲ್ಲ. ಇಂತಹ ಬಾಹ್ಯ ಒತ್ತಡಗಳು ಮಕ್ಕಳಿಗೆ ಬೇರೊಬ್ಬರು ಹೇರಿದಂತೆ ಭಾಸವಾಗುತ್ತವೆ. ತರಗತಿ ಕೋಣೆಗಳಲ್ಲಿ ನಡೆಯುವ ಪಾಠ ಪ್ರವಚನಗಳೂ ಇದೇ ತೆರನಾದ ಒತ್ತಡ ಎಂದು ಮಕ್ಕಳು ಪರಿಗಣಿಸುತ್ತವೆ. ಅಲ್ಲದೇ, ಸಾಧ್ಯವಾದಷ್ಟೂ ಅವುಗಳ ವಿರುದ್ಧ ದಿಕ್ಕಿನಲ್ಲಿ ಸಾಗಬೇಕಾದ ಮಾರ್ಗೋಪಾಯಗಳ ಬಗ್ಗೆ ಮನಸ್ಸಿನಲ್ಲಿ ಚಿಂತಿಸುತ್ತಿರುತ್ತಾರೆ. ಹೀಗೆ ಉಪಾಯಗಳನ್ನು ಹೆಣೆಯುವ ಸಂದರ್ಭದಲ್ಲಿ ರಜೆ ಬಂದಲ್ಲಿ ತಮ್ಮ ಮನಸ್ಸು ಮತ್ತು ದೈಹಿಕ ಶಕ್ತಿಯನ್ನೆಲ್ಲಾ ಒಗ್ಗೂಡಿಸಿ, ಸಂತೋಷಪಡುತ್ತಾರೆ!

ಅಂತಿಮವಾಗಿ ತಮ್ಮ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ ಮಕ್ಕಳು ಹೊರಜಗತ್ತನ್ನು ಅರಿಯಲು ತೊಡಗುತ್ತಾರೆ. ಮಕ್ಕಳು ವಯಸ್ಕರಾಗುತ್ತಾ, ಹುಡುಗಾಟಿಕೆಯ ಚಹರೆಗಳನ್ನು ಅನಿವಾರ್ಯವಾಗಿ ಬಿಡಬೇಕಾದ ಬಗ್ಗೆ ಗಮನಹರಿಸುತ್ತಾರೆ. ಹೆತ್ತವರ ಮತ್ತು ಸ್ನೇಹಿತರ ಒತ್ತಾಯಕ್ಕೋ ಅಥವಾ ತನ್ನ ಮನಸ್ವೀ ನಿರ್ಧಾರಕ್ಕೋ, ತಮ್ಮನ್ನು ಸಾರ್ವಜನಿಕ ಕಚೇರಿಗಳಲ್ಲಿ ದುಡಿಯಲು ತೊಡಗಿಸಿಕೊಳ್ಳುತ್ತಾರೆ. ಇನ್ನು ಕೆಲವರು ವಿವಿಧ ಕ್ಷೇತ್ರಗಳಾದ ಕೃಷಿ, ಗ್ಯಾರೇಜ್, ಹೊಟೇಲ್, ವಾಹನ ಚಾಲನೆ, ಪೆಟ್ರೋಲ್ ಪಂಪ್, ಕಲೆ, ನಟನೆ, ಕ್ರೀಡೆ, ಅಡುಗೆ, ಟೈಲರ್, ಮಾಲ್, ಟೆಲಿಫೋನ್ ಬೂತ್ ಇತ್ಯಾದಿಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಈ ಎಲ್ಲಾ ಸಂದರ್ಭಗಳಲ್ಲಿ 'ರಜೆ' ಎನ್ನುವುದು ಸಾಂದರ್ಭಿಕವಾಗಿರುತ್ತದೆ.



ಉದಾಹರಣೆಗೆ ಕೃಷಿಯಲ್ಲಿ ಆಸಕ್ತಿವಹಿಸಿ, ತೊಡಗಿಸಿಕೊಂಡಿರುವ ಯುವಕ ಯುವತಿಯರಿಗೆ ರಜೆ ಎನ್ನುವುದು ಅಷ್ಟೊಂದು ಮಜಾ ತರುವ ವಿಷಯವಲ್ಲ. ದೈಹಿಕ ಶ್ರಮ ಅತಿಯಾದಾಗ ತೆಗೆದುಕೊಳ್ಳುವ ವಿಶ್ರಾಂತಿಯೇ ಅವರಿಗೆ ರಜೆ. ದೇಹ ತನ್ನ ನಿಯಂತ್ರಣ ತಪ್ಪಿ, ರೋಗಾಣುಗಳಿಗೆ ದಾಸನಾದಾಗ, ಸಿಗುವ ವಿಶ್ರಾಂತಿಯೇ ಅವರಿಗೆ ರಜೆಯಾಗಿರುತ್ತದೆ. ಉಳಿದ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವರ್ಗಕ್ಕೂ ದೈಹಿಕ ಮತ್ತು ಮಾನಸಿಕವಾಗಿ ವಿಶ್ರಾಂತಿ ಬೇಕೆನಿಸಿದಾಗ ರಜೆಯ ಅವಶ್ಯಕತೆಯಿರುತ್ತದೆ.

ಇದನ್ನೆಲ್ಲಾ ಹೊರತುಪಡಿಸಿ, ನಮ್ಮ ಸಮಾಜ ಮತ್ತು ಕೌಟುಂಬಿಕ ಸಂರಚನೆಗನುಗುಣವಾಗಿ, ಹೆಚ್ಚಿನ ರಜೆಗಳು ಉಪಯೋಗವಾಗುತ್ತಿರುವುದನ್ನು ನಾವು ಗಮನಿಸಬಹುದು. ಉದಾ: ಮದುವೆ, ಉಪನಯನ, ಶ್ರಾದ್ಧ, ಗ್ರಹಪ್ರವೇಶ ಇತ್ಯಾದಿ ಸಂದರ್ಭಗಳಲ್ಲಿ ನಾವು ರಜೆಯನ್ನು ಉಪಯೋಗಿಸಿಕೊಳ್ಳುತ್ತೇವೆ. ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ, ದೇವಸ್ಥಾನಗಳಿಗೆ ಸುತ್ತುಹಾಕುವುದು, ಸಾಹಿತ್ಯ, ಕಲೆ ಮೊದಾಲಾದ ಪ್ರಕಾರಗಳಲ್ಲಿ ತೊಡಗಿಸಿಕೊಳ್ಳುವುದು ಮತ್ತು ವೀಕ್ಷಿಸುವುದು, ಸಿನಿಮಾಗಳಿಗೆ ಮೀಸಲಿಡುವುದು ಇವೇ ಮೊದಲಾದುವುಗಳಲ್ಲಿ ನಾವು ತೊಡಗಿಸಿಕೊಳ್ಳುವುದೂ 'ರಜೆಯನ್ನು ನೆಪವಾಗಿಸಿ!

ಹೀಗೆ ನೆಪವಾಗಿ ಪರಿಗಣಿಸಲ್ಪಡುವ ರಜೆಯು ವಿಭಿನ್ನ ರೀತಿಯಲ್ಲಿ ಜನಸಮುದಾಯಕ್ಕೆ ಮತ್ತು ವರ್ಗಗಳಿಗೆ ಹೊಂದಿಕೊಳ್ಳುತ್ತದೆ. ಶಹರದ ಜನತೆಗೆ ಭಾನುವಾರದಂದು ಅಥವಾ ರಜಾ ದಿನಗಳಂದು ಶಾಪಿಂಗ್‌ಗೆ ತೆರಳುವುದೂ ರಜೆಯ ಮಹತ್ವವನ್ನು ತಿಳಿಸುತ್ತದೆ. ಇನ್ನುಳಿದವರಿಗೆ, ಮನೆ ಮತ್ತು ಅದರ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸುವುದು ರಜೆಯ ಭಾಗವಾಗಿರುತ್ತದೆ. ಹಾಗೆಯೇ ರಜಾ ದಿನಗಳಲ್ಲಿ ಪ್ರಕೃತಿ ಚಿಕಿತ್ಸೆಗಾಗಿ ತೆರಳುವ ವರ್ಗ ಬಹಳಷ್ಟಿದೆ.

ರಜಾದಿನ ಅಥವಾ ವಿರಾಮವೆಂಬುದು, ಒಂದು ಕೆಲಸವು ಹೊರಹಾಕಬಹುದಾದ ಒತ್ತಡದಿಂದ ಹೊರಬರಲು ತಮ್ಮನ್ನು ತಾವು ಇನ್ನೊಂದು ಕೆಲಸಕ್ಕೆ ಅಣಿಗೊಳಿಸಿ, ಅದರಲ್ಲಿ ತೊಡಗಿಕೊಳ್ಳುವುದು. ಅಂದರೆ, ವಿಶ್ರಾಂತಿ ಎನ್ನುವುದು ಕೆಲಸ ನಿರ್ವಹಿಸುತ್ತಲೇ ಪಡೆದುಕೊಳ್ಳಬೇಕಾದ ಸವಲತ್ತು ಅಥವಾ ಕೆಲಸದ ಬದಲಾವಣೆಯೇ ವಿಶ್ರಾಂತಿ...!!

## 12. Put your feet up…..

- ***Helan K.B***

There is a saying that "An idle mind is the devil's workshop". It means an idle person uses his mind to think up evil things, while a busy person has not time to dwell on anything but his work. I don't completely agree with this because, a person's mind cannot really be idle. It is always busy. Imagine a classroom with Teacher and without Teacher. Child's creativity will grow in the absence of Teacher. In the presence of Teacher Child is restricted to Classroom environment. It concentrates according to the Teacher's instructions. When child is asked to do nothing, when it is left free, it focuses on its own interested area. At this time Child starts drawing or painting or involves in any other crafts work. I believe that child's autonomy will be best developed when it is left free for himself or herself.


When a person sits idly sometimes, there is a scope for birth of creative work. The story of "Harry Potter" originated in J.K Rowling's mind when she was travelling in an ordinary train. Many inventions took place when person was sitting sluggishly. Samuel Taylor Coleridge wrote the great work "Khubla Khan" when he was under the influence of opium. Many great writers will take a leave from their work and will move on to a calm place to create their literary works. Let's take an example of a home. Home maker will cook the food and other household works, during a commercial break provided in the mid of the T.V Program.

It is wrong to believe that, person who has no work to do becomes lazy. Person may not like to do hard work but sometimes the fruitful ideas will generate when a mind is in rest mood. I have done it, if you really wants to experience this, then take a short break and feel it.

## 13. ಪ್ರೀತಿಯ ಗೂಡು

- *ಹೇಮಂತ. ಎಂ.*

ಅಲೆಯ ಮೇಲೆ ಪ್ರೀತಿಯ
ಅರಮನೆಯ ಕಟ್ಟುತ
ಸಂತಸದಿ ನಿನ್ನೊಡನೆ ನಾನಿದ್ದೆ ನಲ್ಲೆ,
ತೊರೆಯೊಂದು ಜೋರಾಗಿ ಬಂದಪ್ಪಳಿಸಲು
ಮರೆಯಾಯಿತು ಗೂಡು, ತೊರೆಯ ನಡುವೆ.
ಗೂಡೇ ಇಲ್ಲದ ನನ್ನೊಡನೆ
ಹಕ್ಕಿ ಬಂದೀತೂ ಹೇಗೆ?
ಬಂದರೂ ಜೊತೆಗಿದ್ದೀತು ಹೇಗೆ?
ನನ್ನನ್ನೇ ನಾ ನಂಬದೆ ಹೋದರೂ
ನಿನ್ನ ನಂಬಿದೆ ನಲ್ಲೆ
ಗುಟ್ಟೇ ಇಲ್ಲದ ಜೀವನ ರಟ್ಟಾಯಿತಿಂದು.
ನನ್ನೀ ಪ್ರೇಮದ ಅರಮನೆಗೆ
ಬರುವೆ ಎಂದು ಕಾದಿದ್ದೆ ಗೆಳತಿ
ಬಾರದೆ ಹೋದೆಯ ಒಡತಿ.....




## 14. ಹಾಲಿಡೇ - ಶ್ರಮದ ನಡುವಿನ ವಿರಾಮ?

- *ನಾರಾಯಣ ಎ.*

ಇಂಗ್ಲಿಷ್ ನಲ್ಲಿ Holiday ಎಂಬ ಶಬ್ದ ನಾಮಪದವೂ ಹೌದು, ಕ್ರಿಯಾಪದವೂ ಹೌದು. ಆದರೆ ಅದರ ಕನ್ನಡ ಭಾಷಾಂತರದ ಬೇರೆ ಬೇರೆ ರೂಪಗಳಲ್ಲಿ ಅದು ನಾಮಪದ ಮಾತ್ರ. ಉದಾಹರಣೆಗೆ ಇಂಗ್ಲಿಷ್ ನಲ್ಲಿ He is holidaying in Hampi ಎಂದು ಬರೆಯಬಹುದು. ಕನ್ನಡದಲ್ಲಿ ಇದನ್ನು ಆತ ಹಂಪಿಯಲ್ಲಿ ರಜೆ ಅನುಭವಿಸುತಿದ್ದಾನೆ ಅಂತಲೋ, ಹಂಪಿಯಲ್ಲಿ ವಿಹಾರದಲ್ಲಿದ್ದಾನೆ ಅಂತಲೋ ಭಾಷಾಂತರಿಸುವಾಗ ರಜೆ ಮತ್ತು ಅನುಭವ/ವಿಹಾರ ಹೀಗೆ ಎರಡು ಪದಗಳನ್ನು ಬಳಸ ಬೇಕಾಗುತ್ತದೆ. ಹಾಗೆಯೇ ಇಂಗ್ಲಿಷ್ ನಲ್ಲಿ holiday, leave, vacation, break, off ಇತ್ಯಾದಿ ಶಬ್ದಗಳನ್ನು ಕನ್ನಡದಲ್ಲಿ ರಜೆ ಎಂಬ ಒಂದೇ ಶಬ್ದ ಬಳಸಿ ಭಾಷಾಂತರಿಸಲಾಗುತ್ತದೆ. ಕೆಲವೊಮ್ಮೆ ಬಿಡುವು ಎನ್ನುವ ಶಬ್ದ ಬಳಕೆಯಾಗುವುದಿದೆ. ಆದರೆ ಅದು ವ್ಯಕ್ತಿಗಳಿಗೆ ಸಂಬಂಧಿಸಿ ಬಳಕೆಯಾಗುವುದಿಲ್ಲ. ಉದಾಹರಣೆಗೆ ನಮ್ಮ ಕಾರ್ಯಾಲಯಕ್ಕೆ ಇಂದು ಬಿಡುವು ಎನ್ನುತ್ತೇವೆಯೇ ಹೊರತು ನಮ್ಮ ಸಹೋದ್ಯೋಗಿ ಇಂದು ಬಿಡುವಿನಲ್ಲಿದ್ದಾರೆ ಎನ್ನುವುದಿಲ್ಲ - ರಜೆಯಲ್ಲಿದ್ದಾರೆ ಎನ್ನುತ್ತೇವೆ. ಆ ರಜೆ ಇಂಗ್ಲಿಷ್ ನ holiday, leave, vacation, break, off ಇವುಗಳಲ್ಲಿ ಯಾವುದಾದರೂ ಒಂದು ಆಗಿರಬಹುದು. ಅವೆಲ್ಲವೂ ಒಂದೇ ಅಲ್ಲ. ಬಹುಶಃ ಈ Holiday ಎನ್ನುವ ಕಲ್ಪನೆಯೇ ದೇಸಿ ಸಂಸ್ಕೃತಿಗೆ ಹೊಸತಿರಬೇಕು. ಆದ ಕಾರಣವೇ ಸ್ಥಳೀಯ ಭಾಷೆಗಳಲ್ಲಿ ಅದಕ್ಕೆ ಸೀಮಿತವಾದ ಪಾರಿಭಾಷಿಕಗಳಿರುವುದು. ಭಾರತದ ಕೃಷಿ ಸಂಸ್ಕೃತಿಯಲ್ಲಿ ಈ Holiday ಎನ್ನುವ ಶಬ್ದಕ್ಕೆ ವಿಶೇಷ ಅರ್ಥವಿಲ್ಲ. ಕೃಷಿಯದ್ದು ನಿರಂತರವಾದ ಕೆಲಸ. ಅಲ್ಲಿ ವಾರದಲ್ಲಿ ಒಂದು ದಿನ ಅಥವಾ ಎರಡು ದಿನ, ಅಥವಾ ತಿಂಗಳಲ್ಲಿ ಒಂದಷ್ಟು ದಿನಗಳ ರಜೆಗೆ ಅವಕಾಶವಿಲ್ಲ. ವಿರಾಮ ಎನ್ನುವ ಕಲ್ಪನೆ ಅಲ್ಲಿ ರಜೆಯ ಜತೆ ತಳುಕು ಹಾಕಿಕೊಂಡಿಲ್ಲ.

ಆಧುನಿಕ ಉದ್ಯೋಗಗಳಲ್ಲಿ ಅಥವಾ ಸಂಘಟಿತ ಉದ್ಯೋಗಗಳಲ್ಲಿ ರಜೆ ಎನ್ನುವುದು ಶ್ರಮದ ನಡುವಿನ ವಿರಾಮ. ಈ ಶ್ರಮ ಮತ್ತು ವಿರಾಮದ ನಡುವಣ ಸಂಬಂಧ ಕೃಷಿ ಮತ್ತು ಕೆಲ ಅಸಂಘಟಿತ ಉದ್ಯೋಗ ಕ್ಷೇತ್ರಗಳಲ್ಲಿ ಒಂದು ರೀತಿಯಲ್ಲಿ ಬದಲಾಗಲೇ ಇಲ್ಲ. ಆದರೆ ಸಂಘಟಿತ ವಲಯಗಳಲ್ಲಿ ಹಾಗಲ್ಲ. ಅಲ್ಲಿ ಶ್ರಮಕ್ಕಾಗಿ ವಿರಾಮವೋ, ವಿರಾಮಕ್ಕಾಗಿ ಶ್ರಮವೋ ಎನ್ನುವ ಒಂದು ಪ್ರಶ್ನೆ ನಿಧಾನವಾಗಿಯಾದರೂ ಪ್ರಸ್ತುತವಾಗುತ್ತಿದೆ. ಹೀಗೆ ಹೇಳಿದ್ದು ಯಾಕೆಂದರೆ ವಿರಾಮ ಎನ್ನುವುದು

ಒಂದು ಅರ್ಥದಲ್ಲಿ ಶ್ರಮದ ಭಾಗ. ಅಂದರೆ ದೇಹಕ್ಕೆ, ಮನಸ್ಸಿಗೆ ಸವೆಸಿದ ಶಕ್ತಿಯನ್ನು ಮತ್ತೆ ಹೊಂದಿಸಿಕೊಳ್ಳಲು ನೀಡುವ ಸಮಯಾವಕಾಶ. ಕೃಷಿ ಕ್ಷೇತ್ರದಲ್ಲಿ ತೊಡಗಿರುವವರಿಗೆ ದೈಹಿಕ ವಿರಾಮ ಪ್ರಧಾನವಾದಷ್ಟು ಮಾನಸಿಕ ವಿರಾಮ ಪ್ರಧಾನವಾಗಿರುವುದಿಲ್ಲ. ಯಾಕೆಂದರೆ ಮಾನಸಿಕ ವಿರಾಮ, ಅಥವಾ ಉಲ್ಲಾಸವನ್ನು ಕೃಷಿಕರು ತಮ್ಮ ಉದ್ಯೋಗದಲ್ಲೇ ಕಂಡುಕೊಂಡಿರುತ್ತಾರೆ. ಕೆಲಸದಲ್ಲಿ ತೊಡಗಿರುವುದೇ ಒಂದು ಉಲ್ಲಸಿತ ಅನುಭವ. ಆದುದರಿಂದಲೇ ಇರಬೇಕು ಈ ರಜೆ, ವಿರಾಮ ಇತ್ಯಾದಿಗಳ ಸಂದರ್ಭಗಳಲ್ಲಿ ಪ್ರಸ್ತುತವಾಗುವ ಇನ್ನೊಂದು ಇಂಗ್ಲಿಷ್ ಶಬ್ದಕ್ಕೆ ಭಾರತೀಯ ಭಾಷೆಗಳಲ್ಲಿ ಸಮಾನಾರ್ಥ ಪದಗಳೇ ಇಲ್ಲ. ಆ ಇಂಗ್ಲಿಷ್ ಶಬ್ದ - boredom. ಕೃಷಿಯ ಸಂದರ್ಭದಲ್ಲಿ ಯಾರೂ boredom ಬಗ್ಗೆ ಮಾತನಾಡುವುದಿಲ್ಲ. ಹಾಗೊಂದು ಪರಿಕಲ್ಪನೆಯೇ ಅಲ್ಲಿಲ್ಲ. ಆದರೆ ಇತರ ಕ್ಷೇತ್ರಗಳಲ್ಲಿ boredom ನಿಂದ ಪಾರಾಗಲು holiday, holidaying ಇತ್ಯಾದಿ.



ಹಾಗಾದರೆ ಕೃಷಿಯಲ್ಲಿ ತೊಡಗಿರುವವರಿಗೆ ಬೋರ್ ಎನ್ನುವ ಅನುಭವ ಇರಲಿಲ್ಲವೇ. ಮಾಡಿದ್ದನ್ನೇ ಮಾಡಿ ಬೇಸರವಾಗುತ್ತಿರಲಿಲ್ಲವೇ. ಇತ್ತು. ಆದರೆ ಅವರು ಅದಕ್ಕೆ ತಾವು ಮಾಡುವ ಕೆಲಸದಲ್ಲೇ ಪರಿಹಾರ ಕಂಡುಕೊಂಡರು. ಆ ಕಾರಣಕ್ಕೆ ಜಾನಪದ ಸೃಷ್ಟಿಯಾಯಿತು. ಸಸ್ಯಗಳನ್ನು, ಮಣ್ಣನ್ನು ವಿವಿಧ ರೀತಿಯಲ್ಲಿ ಬಳಸುವ ಅವಿಷ್ಕಾರಗಳಾದವು. ಗ್ರಾಮೀಣ ತಿನಿಸುಗಳ ಅವಿಷ್ಕಾರವಾಯಿತು. ಒಂದೊಂದು ಕಡೆ ಒಂದೊಂದು ಸಂಸ್ಕೃತಿ ಸೃಷ್ಟಿಯಾಯಿತು. ಒಂದೋ ಎರಡು ಕಿಲೋ ಮೀಟರ್ ಕ್ರಮಿಸಿದರೆ ಹೊಸತೇನೋ ಇರುತಿತ್ತು. ಬೋರ್ ಡಮ್ ಎನ್ನುವುದು ಒಂದು ಸೃಜನಶೀಲ ಶಕ್ತಿ (creative energy) ಆಯಿತು. ಆಧುನಿಕ ಜೀವನದಲ್ಲಿ boredom ಅನ್ನು ನಿವಾರಿಸಲು ಹೊರಗಡೆ holidaying ಎಂದು ಪ್ರಾರಂಭವಾಯಿತೋ ಅಂದಿಗೆ ಅವೆಲ್ಲವೂ ನಿಂತು ಹೋದಂತಿದೆ. Holiday ಗೆ ಎಂದು ಹೋದ ಸ್ಥಳ ಮಾತ್ರ ಹೊಸತು. ಉಳಿದದ್ದೆಲ್ಲಾ ಎಲ್ಲಾ ಕಡೆ ಇದ್ದದ್ದೆ. ಪ್ರಪಂಚಕ್ಕೆಲ್ಲಾ ತಮ್ಮ ವಿಶಿಷ್ಟ ಖಾದ್ಯಗಳನ್ನು ನೀಡಿದ ಉಡುಪಿಗೆ holiday ಗೆ ಎಂದು ಹೋದರೆ ಅಲ್ಲಿ ಒಂದೇ ಒಂದು ಸ್ಥಳೀಯ ತಿನಿಸು ಸಿಗುವ ಹೋಟೆಲ್ ಇಲ್ಲ. ಮತ್ತೆ ಅದೇ ಚನ್ನ ಮಸಾಲ, ಪನ್ನೀರ್ ಪಲಾಕ್, ನಾರ್ಥ್ ಇಂಡಿಯನ್ ಪುಲಾವ್...ಸಿಗುತ್ತದೆ. ಕಂಪ್ಯೂಟರ್, ಮೊಬೈಲ್ ಫೋನ್ ಬಗಲಲ್ಲಿದ್ದಾಗ ಸ್ಥಳ ಬದಲಾದರೂ ಹೊಸ ಸ್ಥಳಕ್ಕೆ ಬಂದಂತೆ ಅನ್ನಿಸುವುದೂ ಕಷ್ಟವಾಗ ತೊಡಗಿದೆ. ಇದ್ದಲ್ಲೇ ಇದ್ದು holiday ಮಾಡುವುದೇ ಮುಂದೊಂದು ದಿನ ಹೊಸತನವಾಗಿ ಕಾಣಬಹುದೇನೊ?

## 15. ಹೇಗೆ ಮರೆಯಲಿ ಆ ಸಂಭ್ರಮದ ಕ್ಷಣಗಳನು?

- *ಕೆ. ಸಿ. ಬಸವರಾಜಪ್ಪ*

ಹೇಗೆ ಮರೆಯಲಿ ಆ ಸಂಭ್ರಮದ ಕ್ಷಣಗಳನು?
ಜೊತೆಗಾರರೊಂದಿಗೆ ಹಾಡಿ ನಲಿದ ಸಮಯವನು
ನಾ ಕಲಿತೆ ಈಜನು, ಈಜು ಕೊಳವಿಲ್ಲದ ಕೆರೆ ಹೊಳೆಗಳಲಿ.
ಗುರುವಿನ ಗೈರಿನಲಿ, ಎಮ್ಮೆಗಳ ಹಾಜರಿಯಲಿ
ನಮ್ಮೂರಿನ ಎಮ್ಮೆಗಳೇ ನಮ್ಮಯ ಗುರುಗಳು
ಎಮ್ಮೆ ಬಾಲಗಳೇ ನಮಗೆ ಮಾರ್ಗಸೂಚಿಗಳು
ಅದುವೇ ನಮಗೆ ದಡ ತಲುಪಿಸುವ ನಾವಿಕನ ಕೈ ಹುಟ್ಟುಗಳು
ಶನಿವಾರ ಬಂತೆಂದರೆ ಅಪ್ಪನಿಗೋ ಸಂತೆಯ ಸಂಭ್ರಮ
ಆದಿನವೇ ಎಮಗೆ ಶಾಲೆಗುಡಿಯ ಸಾರಿಸುವ ಕಾಯಕದ ಸಮಾಗಮ
ಸೆಗಣಿಯುಂಡೆಗಳ ಜೊತೆ ಆಟವಾಡಿ
ಕೆರೆಯಲಿ ಮನಸ್ಸಾರೆ ಆಡಿ ನಲಿಯುವ ಗೆಳೆಯರ ಸಮಾಗಮ
ಚಿನ್ನಿದಾಂಡುಗಳ ಜೊತೆಯಾಗುವ ಜೊತೆಗಾರರು
ಮಾವಿನ ಮರವೇರಿ ಮನಸ್ಸಾರೆ ಮಾವನ್ನು ಸವಿಯುವ ದಾಂಡಿಗರು
ದನಗಾಹಿಗಳ ಜೊತೆಗೂಡಿ ಹೆಜ್ಜೇನನಿಳಿಸಿ ಜೇನು ಸವಿಯುವ ಗುಂಗಡಿಗಾರರು
ಅತ್ತಿಹಣ್ಣು, ಚಳಗಾಯಿ ಕಿತ್ತು, ಗೆಣಸನ್ನು ಅಗಿದು ಸವಿಯುವ ಚೆನ್ನಿಗರು.



## 16. ಉಳ್ಳವರ ಸಣ್ಣತನ

*– ಗೋಪಾಲಕೃಷ್ಣ ಐ*



ಅಂದು ವಾರದ ಕೊನೆಯ ದಿನ. ಕೆಲಸ ಮುಗಿಸಿ ನಮ್ಮೂರಿಗೆ ಹೋದೆ. ನಾನು ಕಲಿತ ಪ್ರಾಥಮಿಕ ಶಾಲೆಯ ಸುವರ್ಣ ಮಹೋತ್ಸವ ಕಾರ್ಯಕ್ರಮ ಇದೆಯೆಂದು ಪಕ್ಕದ ಮನೆ ಹುಡುಗ ಹೇಳಿದ. ಕೈಲಾದ ಸಹಾಯ ಮಾಡಬೇಕೆಂದು ಶಾಲೆಯ ಹತ್ತಿರ ಹೋಗಿ ಮೇಸ್ಟ್ರನ್ನು ಭೇಟಿ ಮಾಡಿ ಕಾರ್ಯಕ್ರಮದಂದು ಸ್ವಯಂಸೇವಕನಾಗಿ ಬಂದು ಭಾಗವಹಿಸಲು ಸಿದ್ಧ ಎಂದೆ. ಹಾಗೆಯೇ ಎಲ್ಲಾ ಕಾರ್ಯಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡೆ. ನಮ್ಮ ಹಳೆಯ ಮಿತ್ರರನ್ನು ಭೇಟಿ ಮಾಡಿ, ಆ ಶಾಲಾ ದಿನಗಳ ಸವಿನೆನಪುಗಳನ್ನು ಮೆಲುಕು ಹಾಕಿಕೊಂಡೆವು.

ಸುವರ್ಣಮಹೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯುತ್ತಿತ್ತು. ಅ ಸಮಯದಲ್ಲಿ ಸ್ಥಳೀಯ ಶಾಸಕರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಇದರ ಜೊತೆಗೆ ದಾನವಾಗಿ ನಮ್ಮೂರಿನ ಪ್ರಸಿದ್ಧ ಮನೆತನದವರು ಗ್ರಂಥಾಲಯ ಪ್ರಾರಂಭಿಸಲು 25000 ರುಪಾಯಿ ಮೌಲ್ಯದ ಪುಸ್ತಕವನ್ನು ಕೊಡುಗೆಯಾಗಿ ನೀಡಿದ್ದರು. ಅವರಿಗೆ ವೇದಿಕೆಯಲ್ಲಿ ಸನ್ಮಾನ ಕಾರ್ಯಕ್ರಮ ಮಾಡಲಾಯಿತು. ಅಲ್ಲಿದ್ದ ಗಣ್ಯರೂ ಇದನ್ನು ಮುಕ್ತ ಕಂಠದಿಂದ ಪ್ರಶಂಸಿದರು.

ಆ ಕಾಲಕ್ಕೆ ನಮ್ಮೂರಿನಲ್ಲಿ ಇದ್ದಿದ್ದು ಒಂದೇ ಹಿರಿಯ ಪ್ರಾಥಮಿಕ ಶಾಲೆ. ಸುತ್ತಮುತ್ತ ಮೂರು ಮೈಲಿಗಳ ಆಸುಪಾಸು ಬೇರೆ ಯಾವುದೇ ಶಾಲೆಗಳು ಇರಲಿಲ್ಲ. ಈ ಪ್ರತಿಷ್ಠಿತ ಕುಟುಂಬದ ಅಷ್ಟೂ ಮಕ್ಕಳು ಆ ಶಾಲೆಯಲ್ಲಿ ಕಲಿತಿದ್ದರು. ಸುವರ್ಣ ಮಹೋತ್ಸವ ಸಮಿತಿಯವರು ಇವರನ್ನು ಭೇಟಿಮಾಡಿ ನಿಮ್ಮ ಕೊಡುಗೆ ನೀಡಲು ವಿನಂತಿಸಿದ್ದರು. ಇವರೆಲ್ಲರೂ ಸೇರಿ ತಮ್ಮ ತಂದೆಯ ಜ್ಞಾಪಕಾರ್ಥವಾಗಿ ಈ ಸಂಭ್ರಮಾಚರಣೆಯ ಸಂದರ್ಭದಲ್ಲಿ ಶಾಲೆಗೆ ಏನಾದರೂ ಕೊಡುಗೆ ನೀಡಬೇಕೆಂದು ನಿರ್ಧರಿಸಿದ್ದರು. ಹಾಗಿದ್ದರೆ ನಮ್ಮಪ್ಪನ ಹೆಸರಲ್ಲೊಂದು ಗ್ರಂಥಾಲಯ ಮಾಡೋಣ. ಒಂದಷ್ಟು ಪುಸ್ತಕವನ್ನು ಕೊಡುಗೆಯಾಗಿ ನೀಡೋಣ. ಕುಟುಂಬ ಸದಸ್ಯರೆಲ್ಲರೂ ಸೇರಿ ರೂ.25000 ಮೌಲ್ಯದ ಪುಸ್ತಕಗಳನ್ನು ದಾನವಾಗಿ ನೀಡುವುದೆಂದು ತೀರ್ಮಾನಿಸಿದರು. ನಾವು ಓದುವಾಗ ಬೆರಳೆಣಿಕೆಯ ಪುಸ್ತಕವಿತ್ತು. ನಮಗಂತೂ ಅವಕಾಶವಿರಲಿಲ್ಲ. ಮುಂದೆ ಶಾಲೆಗೆ ಬರುವ ಮಕ್ಕಳಿಗೆ ಓದುವ ಹವ್ಯಾಸ ಬೆಳೆಯಲಿ. ಜ್ಞಾನ ದಾಹ ತೀರಿಸಿಕೊಳ್ಳಲಿ, ಮಕ್ಕಳಿಗೆ ಸಹಾಯವಾಗಲಿ ಎಂಬ ಸದಾಶಯದ ಹಾರೈಕೆಯಿಂದ ಇದನ್ನು ಮಾಡುತ್ತೇವೆಂದು ತಿಳಿಸಿದರು. ಸಹೃದಯರು ಇವರ ಕೊಡುಗೆಯನ್ನು ಉತ್ತಮವಾದುದು ಎಂದೂ ಕೊಂಡಾಡಿದರು. ನನಗೂ ಕಲಿತ ಶಾಲೆಯಲ್ಲಿ ಸುಸಜ್ಜಿತ ಗ್ರಂಥಾಲಯ ಇರುವುದು ಹೆಮ್ಮೆಯೆನಿಸಿತು.


ಸಭಾ ಕಾರ್ಯಕ್ರಮ ಮುಗಿದ ನಂತರ ನಾನೂ ಹೋಗಿ ಅವರನ್ನು ಭೇಟಿ ಮಾಡಿ ಅವರನ್ನು ಅಭಿನಂದಿಸಬೇಕು ಎಂದು ಪ್ರಯತ್ನಪಟ್ಟೆ. ಇವರನ್ನು ಅಭಿನಂದಿಸುವ ಮಂದಿ ದೊಡ್ಡದಿತ್ತು. ನಾನು ತುಸು ಹೊತ್ತು ಕಾದೆ. ಜನ ಜಂಗುಳಿ ಕಡಿಮೆಯಾಗಲಿಲ್ಲ. ನಾನು ಸ್ವಯಂಸೇವಕನಾಗಿ ಬೇರೆ ಕಾರ್ಯನಿರ್ವಹಿಸುತ್ತಿದ್ದುದರಿಂದ ಅವರನ್ನು ಮುಖತ: ಭೇಟಿ ಮಾಡಲು ಅಂದು ಸಾಧ್ಯವಾಗಲೇ ಇಲ್ಲ. ಹಾಗೆಯೇ ಅವರ ಮನೆಗೆ ಹೋಗಿಯಾದರೂ ಭೇಟಿ ಮಾಡಲೇಬೇಕು. ಅವರು ಮಾಡಿದ ಕಾರ್ಯವನ್ನು ಪ್ರಶಂಸಿಸಲೇಬೇಕು ಎಂದು ಮರುದಿನ ಅವರ ಮನೆಯತ್ತ ಹೊರಟೆ. ಮನೆಯ ಅಂಗಳ ತಲುಪಿದಾಗ ಅವರೆಲ್ಲರೂ ಗಹನವಾದ ಚರ್ಚೆಯಲ್ಲಿ ತೊಡಗಿದ್ದರು. ಇವರನ್ನು ಕಾದು ಮಾತನಾಡಿಸಿ ಹೋಗುವುದೇ?. ಅವರ ಚರ್ಚೆಯನ್ನು ಕೇಳಿಸಿಕೊಳ್ಳುವುದು ಸರಿಯೇ? ಎಂಬ ತೊಳಲಾಟದಲ್ಲಿದ್ದೆ. ಆಗಲೇ ನನ್ನನ್ನು ನೋಡಿದ ಮನೆಯೊಡತಿ ಬಂದು, ಒಳಕ್ಕೆ ಬಾ ಎಂದು ಕರೆದರು. ಮನೆಯ ವರಾಂಡದಲ್ಲಿ ಕುಳಿತಿದ್ದ ನನಗೆ ಅವರ ಮಾತು ಸ್ಪಷ್ಟವಾಗಿ ಕೇಳುತ್ತಿತ್ತು. ಬಹುಶ: ನಾನು ಬಂದಿದ್ದು ಅವರ ಗಮನಕ್ಕೆ ಬರಲಿಲ್ಲವೋ, ನನ್ನ ಉಪಸ್ಥಿತಿಯನ್ನು ಉದಾಸೀನ ಮಾಡಿದರೋ, ಅವರ ಮಾತುಕತೆ ನಿರಂತರವಾಗಿ ನಡೆದಿತ್ತು. ಅಣ್ಣ ತಮ್ಮಂದಿರ ನಡುವೆ ಯಾರು ಎಷ್ಟು ಹಣವನ್ನು ನೀಡಬೇಕು ಎಂಬ ಕುರಿತು ಚರ್ಚೆಯಲ್ಲಿ ತೊಡಗಿದ್ದರು. ಹಿರಿಯಣ್ಣಂದಿರಿಬ್ಬರೂ ಕೃಷಿ ಮಾಡಿಕೊಂಡು ಹಳ್ಳಿಯಲ್ಲಿಯೇ ಇರುವುದು. ಅವರಿಗೆ ಬರುವ ಆದಾಯ ಅಷ್ಟಕ್ಕಷ್ಟೇ. ಅವರಿಂದ ನಾವು ಯಾವುದೇ ಸಹಾಯವನ್ನು ನಿರೀಕ್ಷಿಸುವುದು ಬೇಡ. ಉಳಿದ ಮೂವರು ಸಮಾನವಾಗಿ ಹಂಚಿಕೊಳ್ಳೋಣ ಎಂದು ಚಂದ್ರಣ್ಣ ಸಲಹೆ ಮಾಡಿದ. ಇತ್ತೀಚಿಗೆ ಸಾಲಸೋಲ ಮಾಡಿ ಮನೆ ಕಟ್ಟಿದ್ದೇನೆ. ನನಗೊಂದಿಷ್ಟು ರಿಯಾಯಿತಿ ಮಾಡಿ ಎಂದು ಕೊನೆಯ ತಮ್ಮ ರಾಮಣ್ಣ ವಿನಂತಿಸಿದ.

ಆಗಲೇ ಗೊತ್ತಾಗಿದ್ದು ಇವರ ನಿಜವಾದ ಅಸಲಿ ವರಸೆ. ಬೆಂಗಳೂರಿನಲ್ಲಿರುವ ಈಚಣ್ಣ ಇದರ ಸಂಪೂರ್ಣ ಜವಬ್ದಾರಿ ವಹಿಸಿಕೊಂಡಿದ್ದರು. ಇವರು ಮಹಾನಗರದಲ್ಲಿ ಪ್ರತಿಷ್ಠಿತರು ಎಂಬವರ ಸಾಲಿಗೆ ಸೇರಿದ್ದರು. ಸಮಾಜದಲ್ಲಿ ಒಳ್ಳೆಯ ಹೆಸರು ಇತ್ತು. ಊರಿನವರು ಗೌರವ ನೀಡುತ್ತಿದ್ದರು. ಕುಟುಂಬದಲ್ಲೂ ಸಜ್ಜನ ಎಂದೆನಿಸಿದ್ದರು. ಇವರು 'ನನಗೆ ಸಾಕಷ್ಟು ಪರಿಚಯವಿರುವ ಪುಸ್ತಕ ಪ್ರಕಟಿಸುವ ಸಂಸ್ಥೆಗಳಿಂದ ಈ ಪುಸ್ತಕವನ್ನು ಖರೀದಿಸಿದ್ದೇನೆ. ನನ್ನೆಲ್ಲಾ ಪ್ರಭಾವಗಳನ್ನು ಬಳಸಿಕೊಂಡಿದ್ದೇನೆ. ಈ ಪುಸ್ತಕದ ಮುಖ ಬೆಲೆಯ ಶೇಕಡಾ 25ರಷ್ಟು ರಿಯಾಯಿತಿ ಪಡೆದುಕೊಂಡಿದ್ದೇನೆ. ನೀವು ನಿಮ್ಮ ಪಾಲಿನ ದುಡ್ಡು ಕೊಡುವಾಗ ನಿಜವಾದ ಮೌಲ್ಯವನ್ನು ನೀಡಿದರೆ ಸಾಕು. ಈ ಸಂಗತಿಯನ್ನು ಶಾಲೆಯವರೊಂದಿಗೆ ಹೇಳಿಲ್ಲ. ನೀವು ಹೇಳುವುದು ಬೇಡ' ಎಂದು ಫರ್ಮಾನು ಹೊರಡಿಸಿದ. ಈ ಮಾತುಗಳು ನಾನು ಮಾಡಲು ಬಂದ ಉದ್ದೇಶವನ್ನೇ ಅಣಕಿಸುವಂತಿತ್ತು.

ನಾನು ಕಲಿತ ಶಾಲೆಗೆ ಕೊಡುಗೆ ನೀಡುವುದನ್ನು ಪ್ರಶಂಸಿಸಲೇಬೇಕು. ಬಲಗೈಯಲ್ಲಿ ಕೊಟ್ಟ ದಾನ ಎಡಗೈಗೆ ಗೊತ್ತಾಗಬಾರದು. ಪುಸ್ತಕದ ನಿಜವಾದ ಮೌಲ್ಯ ಬೇರೆ. ಸಾರ್ವಜನಿಕವಾಗಿ ಪ್ರದರ್ಶಿಸುವುದು ಬೇರೆ. ಅವರು ಮಾಡಿದ ಕಾರ್ಯವನ್ನು ಮುಖತ: ಭೇಟಿ ಮಾಡಿ ಕೊಂಡಾಡಲೇಬೇಕು ಎಂದು ಹೊರಟವನು ನಾನು. ಪ್ರಶಂಸೆಯ ಮಾತುಗಳು ನನ್ನಲ್ಲೇ ಉಳಿದುಕೊಂಡವು. ಹೇಳುವುದು ಒಂದು ... ಮಾಡುವುದು ಇನ್ನೊಂದು... ಯಾಕೆ ಎಂಬ ಪ್ರಶ್ನೆ ನನಗೆ ಇಂದಿಗೂ ಕಾಡುತ್ತಿದೆ. ನಿಮಗೂ....?

## 17. ಮಧ್ಯರಾತ್ರಿ ಸಿಕ್ಕ ರಜೆ

*– ಗುಂಡಪ್ಪ ಕಾಟೇಕರ*




ಜನ ಜಂಗುಳಿ ಒಬ್ರು ಮಾತನಾಡಿದ್ದು ಇನ್ನೊಬ್ಬರಿಗೆ ಕೇಳಿಸುತ್ತಿಲ್ಲ. ಆಗಲೆ ರಾತ್ರಿ ಹತ್ತರ ಗಂಟೆ ಬಾರಿಸಿ ಚಿಕ್ಕ ಮಳ್ಳು ಯಾರು ನಿಂತರೂ ನಾನು ಮಾತ್ರ ನಿಲ್ಲುವುದಿಲ್ಲ ಎಂಬಂತೆ ಹನ್ನೊಂದರ ಅಂಕಿಯ ಸಾಮಿಪ್ಯವನ್ನು ಬಯಸುತಿತ್ತು. ಆದರು ಕೂಡ ಜನಗಳು ಅತ್ತಿಂದಿತ್ತ ಇತ್ತಿಂದತ್ತ ತಿರುಗಾಡುತ್ತಾ, ಯಾವುದಾದರೂ ಒಂದು ಬಸ್ಸು ಬಂದರು ಕೂಡ, ಚೀರೂತ್ತಾ, ಓಡೋಡಿ ಹೋಗಿ ಅದರ ಮುಖವನ್ನು ನೋಡಿ, ಇವರು ಮುಖವನ್ನು ಸಪ್ಪಗೆ ಮಾಡಿಕೊಂಡು ಬಂದು ಮತ್ತೆ ಬರುವ ಬಸ್ಸಿನ ದಾರಿಯನ್ನು ಕಾಯುತ್ತಾ ತಮ್ಮ ಸೀಟಿನ ಮೇಲೆ ಕೂಡುತ್ತಿದ್ದರು. ಇದು ಒಂದು ತಾಸು ಎರಡು ತಾಸಿನಿಂದ ನಡೆದ ಕಸರತ್ತಲ್ಲ. ಸಾಯಂಕಾಲ ಆರು ಗಂಟೆಯಿಂದ ಹಾಗೆಯೇ ಮುಂದುವರೆದುಕೊಂಡು ಸಾಗುತ್ತಿರುವ ಕಸರತ್ತು. ಇಂಥ ಕಸರತ್ತು ನಡೆಸುವ ಜನಗಳ ಮಧ್ಯ ನಾನೂ ಕೂಡ ಒಬ್ಬನಾಗಿದ್ದೆ.

ಅಂದು ಜನೇವರಿ 13ನೇ ತಾರೀಕು ನನಗೆ ಊರಿಗೆ ಹೋಗುವ ಸಂಭ್ರಮ. ಏಕೆಂದರೆ ಮರುದಿನ ಅಂದರೆ ಜನೆವರಿ 14 ರಂದು ಸಂಕ್ರಾಂತಿ ಹಬ್ಬ. ಹೀಗಾಗಿ ನನ್ನ ಕಾಲೇಜಿಗೆ ರಜೆ ನೀಡಲಾಗಿತ್ತು. ಹಬ್ಬಕ್ಕೆ ಊರಿಗೆ ಹೋಗುವುದೆಂದರೆ ಹೊಸದಾಗಿ ಗಂಡನ ಮನೆಗೆ ಹೋಗಿ, ಹಬ್ಬಕ್ಕೆಂದು ತವರು ಮನೆಗೆ ಬರುವ ಹೆಣ್ಣು ಮಕ್ಕಳಷ್ಟೇ ಖುಸಿ ನನಗೂ ಕೂಡ ಆಗಿತ್ತು ಈ ಕಲಬುರ್ಗಿ ನನ್ನ ಪಾಲಿಗೆ ಆಗ ಗಂಡನ ಮನೆಯಂತೆ ಭಾಸವಾಗುತ್ತಿತ್ತು. ಇಲ್ಲಿ ನನ್ನ ಹಳೆಯ ಗೆಳೆಯರ್‍ಯಾರು ನನಗೆ ಸಿಗುತ್ತಿರಲಿಲ್ಲ. ಹೀಗೆ ಗೆಳೆಯರ ಮತ್ತು ಅಪ್ಪ ಅಮ್ಮನ ಜೊತೆ ಸಂತೋಷವಾಗಿ ಒಂದೆರಡು ದಿನ ಕಾಲೇಜಿನ ಗೊಡವೆಯೇ ಇಲ್ಲದಂತೆ ಊರಿನಲ್ಲಿ ಆರಾಮವಾಗಿ ಇರಬೇಕೆಂಬ ಸಂತೋಷದಲ್ಲಿ ಊರಿಗೆ ಹೊರಡುವ ಸಿದ್ಧತೆ ಮಾಡಿಕೊಂಡು, ಬಸ್ಸು ಬರುವುದು ಏಳು ಗಂಟೆಗೆಂದು ಗೊತ್ತಿದ್ದರೂ ಕೂಡ ಆರು ಗಂಟೆಗೆ ಬಂದು ಬಸ್ಸ್ಯಾಂಡಿಗೆ ಬಂದುಬಿಟ್ಟೆ. ಆರು ಗಂಟೆಯಿಂದ ಏಳು ಗಂಟೆ ಆಗಲು ಬಹಾಳ ಹೊತ್ತು ಬೇಗುವದಿಲ್ಲ ಎಂಬಂತೆ ನನ್ನಷ್ಟಕ್ಕೆ ಸಮರ್ಥನೆ ಮಾಡಿಕೊಳ್ಳುತ್ತಾ ಬಸ್ಸಿನ ದಾರಿಯನ್ನು ಕಾಯುತ್ತಾ ಕುಳಿತುಕೊಂಡೆ.

ನನ್ನಂತೆ ಊರಿಗೆ ಹೋಗಲು ಕಾದು ಕುಳಿತವರು ಸುಮಾರು ಒಂದು ನಲವತ್ತರಿಂದ ಐವತ್ತು ಜನರಿದ್ದರು. ಅವರಲ್ಲಿ ಮಕ್ಕಳು ಹೊಸದಾಗಿ ಮದುವೆಯಾಗಿ ಗಂಡನ ಮನೆಗೆ ಹೋದ ಹೆಂಗಳೆಯರು, ಹಿರಿಯರು ಹಾಗು ನನ್ನಂಥ ಕಾಲೇಜು ಹುಡುಗರು ಇದ್ದೇವು. ಪಾಪ ತಮ್ಮ ತಾತ–ಅಜ್ಜಿಯರ ಮನೆಗೆ ಹಬ್ಬಕ್ಕೆಂದು ಹೊರಟ ಮಕ್ಕಳು ಎಷ್ಟೋ ಖುಸಿಯಿಂದ ಕುಣಿದು ಕುಪ್ಪಳಿಸಿ, ಬಸ್ಸಿಗಾಗಿ ಕಾದು ಸುಸ್ತಾಗಿ ತಮ್ಮ ತಾಯಂದಿರ ತೊಡೆಯ ಮೇಲೆಯೇ ನಿದ್ರಾ ದೇವಿಯ ಮಡಿಲನ್ನು ಸೇರಿದವು. ಮಕ್ಕಳೇಕೆ ತವರು ಮನೆಗೆ ಬರುವ ಹೆಣ್ಣು ಮಕ್ಕಳು ಬೇಗನೆ ಹೋಗಿ ತನ್ನವರನ್ನೆಲ್ಲ ಹಾಗು ಬಾಲ್ಯದ ಗೆಳತಿಯರನ್ನೆಲ್ಲ ಬೇಗನೆ ಕಾಣಬೇಕೆಂದು ಮಹಾದಾಸೆಯನ್ನಿಟ್ಟುಕೊಂಡು, ಬಸ್ಸಿಗಾಗಿ ಕಾದು ಯಾಕಾದೆರೂ ಬಂದೆ ಅನ್ನುವ ಸ್ಥಿತಿಗೆ ಬಂದಿದ್ದರು. ನನ್ನಂಥ ಹುಡುಗರ ಸ್ಥಿತಿಯಂತು ಕೇಳುವುದೆ ಬೇಡ. ಬಸ್ಸು ಈಗ ಬರುತ್ತದೆ, ಇನ್ನೊಂದು ಅರ್ಧ ಗಂಟೆಯಲ್ಲಿ ಬರುತ್ತದೆಂದು ಕಾದು ಸುಸ್ತಾಗಿ, ಬಸ್ಸ್ಯಾಂಡಿನಲ್ಲಿರುವ ಗಡಿಯಾರದಲ್ಲಿ ಹನ್ನೆರಡು ಗಂಟೆ ಬಾರಿಸಿದ ತಕ್ಷಣ ನಮಗೆ ಭಯ ಸುರುವಾಯಿತು. ಏಕೆಂದರೆ ಅಲ್ಲಿಗೆ ಬಸ್ಸು ಬರುವ ಎಲ್ಲ ಸೂಚನೆಗಳು ಮುಗಿದು ಹೋಗಿದ್ದವು.

ಬಸ್ಸುಗಳನ್ನು ಬಿಡುವ ಕಂಟ್ರೋಲರ್ ತನ್ನ ಕುರ್ಚಿಯಿಂದ ಎದ್ದು ಮಲಗಲು ಹೊರಟು ಹೋದನು. ಆದರೆ ಹೋಗುವಾಗ ಸುಮ್ಮನೆ ಹೋಗಲಿಲ್ಲ ನಿಮ್ಮ ಊರಿಗೆ ಇವತ್ತು ಬಸ್ಸು ಬರುವುದಿಲ್ಲ. ಆದ್ದರಿಂದ ನೀವೆಲ್ಲರೂ ಯಾವುದಾದರೂ ನಿಮ್ಮ ಬಂಧುಗಳ ಊರಿಗೆ ಹೋಗಿ, ಮುಂಜಾನೆ ಬರ್‍ರಿ ಎಂದು ಹೇಳಿ ಹೋದನು. ಅವನ ಮಾತು ಕೇಳಿ ನನಗೆ ಭಯಂಕರ ಕೋಪ ಬಂದಿತು. ಪಾಪ ಅವನಿಗೇನು ಗೊತ್ತು ನಾವು ಹೊತ್ತುಕೊಂಡು ಬಂದ ಭಾವನೆಗಳ ಭಾರ. ಅವು ನಮ್ಮ ನಮ್ಮ ಮನೆಗೆ ಹೋಗಿ ಇಳಿಸಬೇಕೆಂದು ನಾವು ಹೊರಟರೆ ಸಂಬಂಧಿಕರ ಮನೆಗೆ ಹೋಗಲು ತಿಳಿಸುತಿದ್ದಾನೆ. ಅವನ ಮಾತನ್ನು ಕೇಳಿ ನಮ್ಮಲಿ ಕೆಲವರು ಅವನ ಜೊತೆ ಜಗಳಕ್ಕಿಳಿದರು. ಆಗ ಅವನು ನೀವು ನನಗೇನು ಕೇಳಬೇಡಿ, ನಿಮಗೇನಾದರು ಕೇಳುವುದಿದ್ದರೆ ಡೀಪೋಕ್ಕೆ ಹೋಗಿ ಅಲ್ಲಿರುವ ಅಧಿಕಾರಿಯನ್ನು ಕೇಳಿ ತಿಳಿದುಕೊಳ್ಳಿ ಎಂದು ಹಾರಿಕೆಯ ಉತ್ತರವನ್ನು ನೀಡಿದನು. ಅವನು ಅಷ್ಟು ಹೇಳಿದ್ದೆ ತಡ ನಮ್ಮಲ್ಲಿದ್ದ ಹಿರಿಯರು ತಮ್ಮ ತಮ್ಮಲ್ಲೆ ಮಾತನಾಡಿಕೊಂಡು ಡೀಪೋಗೆ ಹೋಗುವುದಾಗಿ ನಿರ್ಧರಿಸಿ ಹೊರಟು ನಿಂತರು. ನಾವು ಕೆಲವರು ಅವರ ಜೊತೆ ಹೊರಟೇವು. ಬಸ್ಸ್ಯಾಂಡಿನಿಂದ ಹತ್ತು ನಿಮಿಷದಲ್ಲಿ ನಾವೆಲ್ಲರು ಡೀಪೋವನ್ನು ತಲುಪಿದೇವು.

ಆಗ ಸಮಯ ಬರೋಬ್ಬರಿ ಒಂದು ಗಂಟೆಯಾಗಿತ್ತು. ಒಳಗಡೆ ಹೋಗಬೇಕೆಂದರೆ ದ್ವಾರ ಪಾಲಕ ನಮಗ್ಯಾರಿಗೂ ಒಳಗೆ ಬಿಡದಾದನು. ನಮಗಾಗಲೆ ಕಾದು ಸಾಕಾಗಿತ್ತು. ಹೀಗಾಗಿ ಅವನನ್ನು ತಳ್ಳಿಕೊಂಡು ಒಳಗೆ ಹೋಗಿ ಆಫೀಸರ ಎದುರಿಗೆ ನಿಂತು ಬಸ್ಸು ಕಳಿಸಬೇಕೆಂದು ಹಟ ಹಿಡಿದೆವು. ಆಫೀಸರು ಹೇಳಿದರು ಬಸ್ಸು ಕಳಿಸಬಹುದಿತ್ತು, ಆದರೆ ಯಾರೊಬ್ಬ ಚಾಲಕ–ನಿರ್ವಾಹಕರಿಲ್ಲ. ಆದ್ದರಿಂದ ಬೆಳಗಾಗುವವರೆಗೂ ನಿಮ್ಮೂರಿಗೆ ಬಸ್ಸು ಕಳಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನೀವು ಹೇಗೂ ಅರ್ಧ ರಾತ್ರಿಯನ್ನು ಕಳೆದಿದ್ದೀರಿ ಇನ್ನೊಂದೆರಡು ಗಂಟೆ ಕಳೆದರೆ ಬೆಳಗಿನ ಜಾವವಾಗುತ್ತದೆ. ಆಗ ಯಾರಾದರು ಚಾಲಕ–ನಿರ್ವಾಹಕ ಬಂದರೆ ಖಂಡಿತ ನಿಮಗೆ ಬಸ್ಸು ಕಳಿಸುತ್ತೆನಂದರು.


ನಮಗೆ ಮುಂದೆ ಮಾತನಾಡುವುದಕ್ಕೆ ವಿಷಯವೇ ಇಲ್ಲದಂತಾಗಿ ಎಲ್ಲರು ಆಫಿಸಿನಂದ ಹೊರಗಡೆ ಬಂದು ಪ್ರಶ್ನಾರ್ಥಕವಾಗಿ ಒಬ್ಬರನ್ನೊಬ್ಬರು ನೋಡುತ್ತಾ ನಿಂತು ಬಿಟ್ಟೇವು. ಅಷ್ಟರಲ್ಲೆ ನಮ್ಮ ಪಾಲಿನ ದೇವರೆಂಬಂತೆ ಒಬ್ಬ ಚಾಲಕ ಬಂದು, ಹೀಗೆ ಹೇಳಿದ. ನನ್ನ ಡ್ಯೂಟಿ ಬೆಳಗ್ಗೆ 5–30 ಕ್ಕೆ ಇದೆ ಅಲ್ಲಿಯವರೆಗೆ ನಾನು ನಿಮ್ಮನ್ನು ಊರಿಗೆ ಬಿಟ್ಟು ಬರುತ್ತೇನೆ. ಆದರೆ ನಿರ್ವಾಹಕ ಇಲ್ಲ ಆದ್ದರಿಂದ ನೀವು ನಮ್ಮ ಸಾಹೇಬ್ರಿಗೆ ಹೇಳಿ, ಇಲ್ಲೆ ನಿಮ್ಮ ಟಿಕೇಟನ್ನು ತೆಗೆದುಕೊಂಡರೆ ನನ್ನ ಬಸ್ಸಿನಲ್ಲಿ ಬಿಡುತ್ತೇನೆಂದು ಹೇಳಿದರು. ಅವರ ಮಾತನ್ನು ಕೇಳಿ ನಮಗೆ ಹೋದ ಜೀವ ಮತ್ತೆ ಬಂದಂತಾಗಿ ಆಫಿಸರ್ ಬಳಿ ಹೋದೇವು. ಆದರೆ ಅವರು ಇದಕ್ಕೆ ಸುತಾರಾಂ ಒಪ್ಪದಾದರು. ಅದರೂ ಹಾಗೆ ಹೀಗೆ ಮಾಡಿ ಅವರನ್ನು ಒಪ್ಪಿಸಿ ಬಸ್ಸನ್ನು ಡ್ಯೂಪೋದಿಂದ ಬಸ್ಸ್ಯಾಂಡಿಗೆ ತಂದು ನಿಲ್ಲಿಸಲಾಯಿತು. ಅಲ್ಲಿಗೆ ಗಡಿಯಾರದಲ್ಲಿನ ಸಣ್ಣ ಮುಳ್ಳು ಎರಡಂಕಿಯ ಮೇಲೆ ನಿಂತು ತನ್ನ ಕರ್ತವ್ಯ ನಿಷ್ಠೆಯನ್ನು ಸಾರಿ–ಸಾರಿ ಹೇಳುತಿತ್ತು. ಎಲ್ಲರು ಖುಸಿಯಿಂದ ಬಸ್ಸನ್ನು ಹತ್ತಿದೆವು. ಬಸ್ಸು ರಾತ್ರಿ ಸರಿಯಾಗಿ ಮೂರು ಗಂಟೆಗೆ ನಮ್ಮೂರ ಸೀಮೆಯನ್ನು ತಲುಪಿತು. ಆಗ ನನಗೆ ಖಾತ್ರಿಯಾಯಿತು. ತಡವಾಗಿಯಾದರೂ ಪರವಾಗಿಲ್ಲ ಒಟ್ಟಾರೆ ಹಬ್ಬವಂತು ತಪ್ಪಲಿಲ್ಲ. ಕಾಲೇಜು ರಜೆ ನೀಡಿದರು ಕೂಡ ಬಸ್ಸು ಬರದೆ ಇದ್ದರೆ.............?

## 18. ರಜಾದಿನಗಳು

– *ಕಲಂದರ್ ಎಸ್*

ಬದುಕಿನ ಮಿಂಚುವ ಬಣ್ಣಗಳು
ಸಂಚನು ರೂಪಿಸೋ ಕಣ್ಣುಗಳು
ರಜಾದಿನಗಳು ಆ ಮಜಾದಿನಗಳು
ರಜಾದಿನಗಳು ಈ ಮಜಾದಿನಗಳು

ಇರುಳಿನ ಕತ್ತಲೆ ಸರಿದಿರಲು
ಭಾನುವಾರವು ಬಂದಪ್ಪಳಿಸಿರಲು
ಬುಗುರಿ ಗೋಲಿಗಳು ಸಂಭ್ರಮಿಸಿರಲು
ಪುಟ್ಟ ಹೃದಯಗಳು ಕುಣಿದಿರಲು
ಬಂದವು ನೋಡಿರಿ
ರಜಾದಿನಗಳು ಆ ಮಜಾದಿನಗಳು



ಆಟದ ಅಪ್ಪುಗೆ, ಗೆಳೆಯರ ಒಪ್ಪಿಗೆ
ನಿದ್ದೆಕೆಡಿಸಿದ ಸುಂದರ ಸ್ವಪ್ನಗಳು
ಅಮ್ಮನ ಕಾಟಕೆ ಬೇಸರಗೊಂಡು
ಗೆಳೆಯರ ಕೂಗಿಗೆ ತಳಮಳಗೊಂಡು
ಕುಣಿಯುತ ಬರುವ ದಿವ್ಯ ಸ್ವಪ್ನಗಳು
ರಜಾದಿನಗಳು ಆ ಮಜಾದಿನಗಳು

ಮಕ್ಕಳಿಗಲ್ಲದೆ, ಯುವಕರಿಗಲ್ಲದೆ, ಮುದುಕರು ಕೂಡ
ಹುಚ್ಚೆದ್ದು ಕುಣಿಯುವ ಮಾಯದ ದಿನಗಳು
ಆಸೆಯ ಕಣ್ಣಿಗೆ ತಣ್ಣೀರೆರಚದೆ,
ಕಣ್ಣೀರ್ ಒರೆಸುವ ಸುಂದರ ದಿನಗಳು
ರಜಾದಿನಗಳು ಆ ಮಜಾದಿನಗಳು

ಇದರ ಜೊತೆಯಿರಲು ಬಯಸದವರಿಲ್ಲ
ಬೇಡ ಎಂದವ ಹುಟ್ಟೇಇಲ್ಲ
ನಗುತ ಬಾಳಿದರೆ ಸ್ವರ್ಗವೇ ಎಲ್ಲ
ಆ ಸ್ವರ್ಗದ ಕಾಂತಿ ಎಲ್ಲೂ ಇಲ್ಲ
ರಜಾದಿನದಲಿ ಅಡಗಿದೆಯಲ್ಲ.

## 19. ರಜಾ ದಿನ ಹೀಗೂ ಅರ್ಥಪೂರ್ಣವಾಗಿಸಬಹುದೇ?

– *ನಾಜೀವಿ*

ಅಬ್ಬಾ ಏನಿದು ಟ್ರಾಫಿಕ್ಕು! ಮೆಜೆಸ್ಟಿಕ್ಕಿನ ತುಂಬೆಲ್ಲಾ ಕಾಲಿಡದಷ್ಟು ಬಸ್ಸಿಗಾಗಿ ಕಾಯುವ ಜನ. ಅಕ್ಷರಶಃ ಇಡೀ ಬೆಂಗಳೂರೇ ಗುಳೆ ಹೊರಟಂತಿರುತ್ತದೆ ಕೇಳಿದರೇ "ಸ್ವಾಮಿ ನಾಲ್ಕು ದಿನ ಕಂಟಿನ್ಯೂಯಸ್ ಸರ್ಕಾರಿ ರಜೆ ಅದಕ್ಕಾಗಿ ಹೀಗೆ "ಎಂಬ ಉತ್ತರ. ಅಯ್ಯೋ ಈ ಆಫೀಸ್ಸು ಅದೇ ಟ್ರಫಿಕ್ಕು. ಅದೇ ಹೋಟೆಲ್ಲು ಸಾಕಾಗಿ ಹೋಯ್ತು ನಾಲ್ಕು ದಿನ ಹಿಲ್ ಸ್ಟೇಶನ್‌ಗೆ ಹೋಗಿ ಬರೋಣ ಅಂದುಕೊಂಡಿದ್ದೀವಿ ಎಂಬ ಪರಸ್ಪರರ ಹರಟೆಗಳು. ಎಲ್ಲೋ ಹೊರಗೆ ಹೋಗಿ ನಾಲ್ಕು ದಿನ ರೆಸಾಲ್ಟನಲ್ಲಿಯೋ, ಸಂಬಂಧಿಕರ ಮನೆಯಲ್ಲೋ ಕಳೆದು ಮತ್ತದೇ ಧಾವಂತದಿಂದ ವಾಪಾಸ್ಸು ಬರುತ್ತೇವೆ, ಇನ್ನು ಕೆಲವು ಜನ ಚಾರಣಕ್ಕೆ ಹೋಗಿ ಬೆವರು ಹರಿಸಿ ಸುಸ್ತಾಗಿ ಸಾಕು ಎಂದು ಮನೆ ಸೇರುತ್ತಾರೆ. ಇವೆಲ್ಲಾ ರಜೆ ಕಳೆಯುವುದಕ್ಕೆ ಸಾಮಾನ್ಯವಾಗಿ ನಾವು ಕಂಡುಕೊಂಡ ತಂತ್ರಗಳು ಆದರೆ ಇತ್ತೀಚಿಗೆ ನಾನೊಂದು ಒಂದು ವಿಶೇಷ ವ್ಯಕ್ತಿಯೊಬ್ಬರನ್ನು ನೋಡಿದೆ ಅವರೂ ರಜೆ ದಿನಗಳಲ್ಲಿ ಮಾಡುವ ಕೆಲಸ ತುಂಬ ವಿಚಿತ್ರವಾದುದು. ಅವರ ಜೀವನ ಗಾಥೆಯನ್ನು ಅವರ ಬಾಯಿಂದಲೇ ಕೇಳಿ.

ನನ್ನ ಹೆಸರು ರಮೇಶ ಊರು ಶೃಂಗೇರಿ ಹತ್ತಿರದ ಜಯಪುರ: ನಾನು ಹುಟ್ಟಿದ ಕೆಲ ವರ್ಷಗಳಲ್ಲಿ ಹೆತ್ತವರು ವಿಧಿವಶರಾದರು ಬೆಳೆದದ್ದು ಚಿಕ್ಕಪ್ಪನ ಆಶ್ರಯದಲ್ಲಿ. ಊರಿನಲ್ಲಿಯೇ ಹಾಗೂ ಹೀಗೂ ಪಿ.ಯು.ಸಿ ಮುಗಿಸಿದೆ. ಆಗ ಚಿಕ್ಕಪ್ಪನ ಮಕ್ಕಳು ಶಾಲೆಗೆ ಹೋಗುವಂತಾದರು ಮುಂದೆ ನಾನು ಓದುವುದು ಕಷ್ಟವೆನಿಸಿತು. "ಕೆಟ್ಟು ಪಟ್ಟಣ ಸೇರು" ಎಂಬಂತೆ ನಾನು ಬೆಂಗಳೂರು ಸೇರಿದೆ. ಮೊದಲೆರಡು ತಿಂಗಳು, ಸ್ನೇಹಿತನ ಮನೆಯಲ್ಲಿ ಉಳಿದುಕೊಂಡೆ ನನಗೆ ಕೆಲಸವಿಲ್ಲವಾದ್ದರಿಂದ ಅವನು ಅಲ್ಪ ಸ್ವಲ್ಪ ಹಣದ ಸಹಾಯ ಮಾಡುತಿದ್ದ. ಅದು ನನ್ನ ಕೆಲಸದ ಬೇಟೆಯ ಬಸ್ ಚಾರ್ಜಗೆ ಸಮವಾಗುತ್ತಿತ್ತು. ಅವನು ಕೆಲಸಕ್ಕೆ ಹೋಗುವ ಮುನ್ನ ಬೆಳಗ್ಗಿನ ಉಪಹಾರ ಕೊಡಿಸಿ ಹೋಗುತ್ತಿದ್ದ ಮಧ್ಯಾಹ್ನ ಊಟಕ್ಕೆ ಹಣವಿಲ್ಲವೆಂದು ಅವನನ್ನು ಕೇಳುವುದು ಹೇಗೆ? ಸಂಜೆ ಅವನು ಬರುವವರೆಗೂ ಲಾಲ್‌ಬಾಗ್‌ನಲ್ಲಿ ಸುಮ್ಮನೆ ಸಮಯ ಕಳೆದು ರಾತ್ರಿ ಅವನು ಬಂದ ನಂತರ ಅವನ ಜೊತೆ ಊಟಕ್ಕೆ ಕರೆದೊಯ್ಯುತ್ತಿದ್ದ.

ಹೀಗೆ ಎರಡು ತಿಂಗಳು ಕಳೆಯಿತು. ಇದ್ದಕ್ಕೆ ಇದ್ದಹಾಗೆಯೇ ಸ್ನೇಹಿತನಿಗೆ ಬಳ್ಳಾರಿಗೆ ವರ್ಗವಾಯಿತು, ದೇವರದಯೆಯಿಂದ ನನಗೂ ಆ ಹೊತ್ತಿಗೆ ಹೋಟೆಲ್ ಒಂದರಲ್ಲಿ ಕ್ಯಾಶಿಯರ್ ಕೆಲಸ ದೊರೆಯಿತು. ಜೀವನಕ್ಕೆ ತೊಂದರೆ ಇಲ್ಲದಿದ್ದರೂ ಓನರ್‌ನ ಕಿರಿ ಕಿರಿ ಜಾಸ್ತಿಯಾಯಿತು. ಹೀಗಿರುವಾಗ ಒಂದು ದಿನ ನನ್ನ ಶಿಫ್ಟ್‌ನಲ್ಲಿ ಹಣ ಕಳ್ಳತನವಾಯಿತು. ಆ ತಕ್ಷಣಕ್ಕೆ ನನ್ನನ್ನು ಆ ಕೆಲಸದಿಂದ ಬಿಡಿಸಿದರು. ಮತ್ತೆ ಹೊಸ ಕೆಲಸಕ್ಕಾಗಿ ಹುಡುಕಾಟ ಶುರುವಿಟ್ಟುಕೊಂಡೆ. ನಾನು ಕೆಲಸ ಮಾಡುತ್ತಿದ್ದ ಹೋಟೆಲ್‌ನಲ್ಲಿದ್ದ ಒಬ್ಬರು ನನ್ನನ್ನು ಹೋಟೆಲ್ ರಾಯಲ್‌ನಲ್ಲಿ ಕೆಲಸಕ್ಕೆ ಸೇರಿಸಿದರು. ಅಲ್ಲಿ ಕೆಲಸ ಸ್ವಲ್ಪ ಒಗ್ಗಿತು. ಸ್ವಲ್ಪ ಹಣಕಾಸಿನ ಪರಿಸ್ಥಿತಿ ಸುಧಾರಿಸಿತು. ಒಂದು ದಿನ ಆಫೀಸ್ ಬಿಟ್ಟು ಬರುವಾಗ ಮಳೆ ಜೋರಾಗಿ ಬರುತ್ತಿತ್ತು. ಒಬ್ಬ ಮಾನಸಿಕ ಅಸ್ವಸ್ಥ ಹೆಂಗಸು ಆ ಮಳೆಯಲ್ಲೂ ಹೊಟ್ಟೆ ಹಸಿವಿನಿಂದ ತೊಟ್ಟಿಯಲ್ಲಿ ಬಿದ್ದಿದ್ದ ಕವರೊಂದಿರಲ್ಲಿನ ಅನ್ನ ತಿನ್ನುತ್ತಿದ್ದಳು. ಈ ದೃಶ್ಯ ನೋಡಿ ನನ್ನ ಮನಸ್ಸು ಬಹು ವಿಚಲಿತಗೊಂಡಿತು. ಅವಳಿಗೆ ಆ ಹೊತ್ತಿನಲ್ಲಿ ಒಂದು ಬನ್ನನ್ನು ತೆಗೆದು ಕೊಟ್ಟೆ ರಾತ್ರಿ ಮನೆಗೆ ಬಂದೆ ಊಟ ಸೇರಲಿಲ್ಲ ಈ ರೀತಿ ಹೊಟ್ಟೆಗಿಲ್ಲದೆ ಏನೇನೊ ತಿನ್ನುವ ಮಾನಸಿಕ ಅಸ್ವಸ್ಥರಿಗೆ ನೆರವು ನೀಡೋಣ ಎಂಬ ಮನಸ್ಸಾಯಿತು. ದೊಡ್ಡ ಮಟ್ಟದಲ್ಲಿ ಅವರಿಗೆ ನಾನು ಸಹಾಯ ಮಾಡುವ ದೃಷ್ಠಿಯಲ್ಲಿ ಇರಲಿಲ್ಲ ಆದರೂ ಹೇಗಾದರೂ ಮಾಡಿ ಸಹಾಯ ಮಾಡುವ ಮನಸ್ಸಾಯಿತು.

ಒಂದು ಭಾನುವಾರ ಸ್ನೇಹಿತನ ಮದುವೆಗೆ ಹೋಗಿದ್ದೆ ಮಳೆ ಬಂದಿದ್ದರಿಂದ ಅಂದು ಮದುವೆಗೆ ನಿರೀಕ್ಷೆಗಿಂತಲು ಕಡಿಮೆ ಜನರು ಬಂದಿದ್ದರು ಸಾಕಷ್ಟು ಊಟ ಉಳಿದಿತ್ತು. ಅದನ್ನು ಏನು ಮಾಡಬೇಕು ಎಂದು ತೋಚದೆ ನಿಂತಿದ್ದರು ಆಗ ನನಗೆ ಒಂದು ಐಡಿಯಾ ಹೊಳೆಯಿತು. ಒಂದು ಆಟೋ ಮಾಡಿಕೊಂಡು ಹತ್ತಿರದ ಭಿಕ್ಷುಕರ ಪುನರ್ ವಸತಿನಿಲಯಕ್ಕೆ ಹೋದೆ. ಈ ಊಟವನ್ನು ತೆಗೆದು ಕೊಳ್ಳುವಂತೆ ಹೇಳಿದೆ ಅವರು ಅದನ್ನು ತೆಗೆದು ಕೊಳ್ಳಲು ನಿರಾಕರಿಸಿದರು. ವಾಪಾಸ್ಸು ಬರುವಾಗ ಇಬ್ಬರು ಭಿಕ್ಷಕರು ನೋಡಿದೆ ಅವರಿಗೆ ಆ ಊಟ ಕೊಟ್ಟು ಬಂದೆ. ಇದೇ ಮುಂದೆ ನನ್ನ ಯೋಜನೆಗೆ ಮೆಟ್ಟಿಲಾಯಿತು. ಪ್ರತಿ ಭಾನುವಾರ ಯಾವುದಾದರು ಚೌಟ್ರಿ ಮುಂದೆ ನಿಂತು ಉಳಿದ ಊಟ ತೆಗೆದುಕೊಂಡು ಮಾನಸಿಕ ಅಸ್ವಸ್ಥ ಭಿಕ್ಷಕರನ್ನು ಹುಡುಕಿಕೊಂಡು ಹೋಗಿ ಕೊಟ್ಟು ಬರುತ್ತಿದ್ದೆ. ಈಗ ನಾನು ಅವರು ಇರುವ ಸ್ಥಳವನ್ನೆಲ್ಲ ತಿಳಿದು ಕೊಂಡಿದ್ದೇನೆ ಪ್ರತೀ ಭಾನುವಾರ ನಾನು ಅವರ ಜೊತೆ ಹಬ್ಬದೂಟ ಮಾಡುತ್ತೇನೆ.

ಅವರು ಹೇಳಿದಾಗ ನನ್ನ ಕಣ್ಣಾಲೆಗಳು ನೀರಾಗಿದ್ದವು.



## 20. ಕೇಳೇ ಗೆಳತಿ….

– *ಹರೀಶ್ಕಬ್ಬಿಗೆರೆ*



ಕೇಳೇ ಗೆಳತಿ………………
ಮಳೆ ಬರುವಮುನ್ನ ನೀ ನನಗೆ ಕಂಡೆ
ಕಾಮನ ಬಿಲ್ಲಿನ ಹಾಗೆ………
ನಂತರ ಕಣ್ಮರೆಯಾದೆ ಬಿಸಿಲ್ಗುದುರೆಯ ಹಾಗೆ………
ಬೇಸಿಗೆಯಲ್ಲಿ ಸುಳಿದು ಹೋದ ತಂಗಾಳಿಯ ಹಾಗೆ………..
ಆದರು ನಾ ನಿನ್ನ ಬಿಡಲಿಲ್ಲ
ನೋಡಬೇಕೆಂಬ ತವಕದಲಿ ಹುಡುಕಾಟ ನಡೆಸಿರುವೆ……..

ಕೇಳೇ ಗೆಳತಿ…………
ಎಲ್ಲಿಂದಲೋ ಗಾಳಿ ಬೀಸಿತು, ವರ್ಷ ದಾವಿಸಿತು.
ಅದು ಬರಿ ಗಾಳಿಯಲ್ಲ ಬರಿ ಮಳೆಯಲ್ಲ
ಪ್ರಳಯದ ಮುನ್ಸೂಚನೆ
ಆದರು ನಿನ್ನ ನೋಡಬೇಕೆಂಬ ಹೆಬ್ಬಯಕೆ ………..

ಕೇಳೇ ಗೆಳತಿ……….
ಪ್ರಳಯ ನನ್ನ ಮೇಲೆ ಅಪ್ಪಳಿಸಿತು
ನಾನು ತೇಲಿ ತೇಲಿ ಮುಳುಗಿ ಸೇರಿದೆ ಕಾಣದ ಕಡಲ
ತಿಳಿಯದ ತೀರವ, ದೊಡ್ಡ ಮಸಣವ…….

ಕೇಳೇ ಗೇಳತಿ………
ಈಗ ನನಗಾಗುತಿದೆ ದುಃಖ, ಕಾಡುತಿದೆ ಒಂಟಿತನ
ಕೊನೆಗೂ ಕಾಣದಾದೆ ನಾ ನಿನ್ನ
ಮುಂದಿನ ಜನ್ಮ ಒಂದಿದ್ದರೆ ಕಂಡು ಕೂಡುವೆ
ನಾ ನಿನ್ನ………..ಕೇಳೇ ಗೆಳತಿ.

## 21. ರಜೆ ನನ್ನ ಅನುಭವದಲ್ಲಿ

– *ಶ್ರೀಲತ ಕೆ ಎನ್*

ಈ ಬಾರಿಯ ಬಯಲು ವಿಷಯದತ್ತ ಕಣ್ಣಾಡಿಸಿದೆ, ಬರೆಯಬೇಕೆನಿಸುವ ಭಾವ ಆ ಕ್ಷಣ ಮನದಲ್ಲಿ ಮೂಡಲಿಲ್ಲ. ಆ ನಂತರ ನಿಧಾನವಾಗಿ ಯೋಚಿಸಿದೆ. ರಜೆ, ವಿರಾಮ ಇವೆಲ್ಲವೂ ಬದುಕಿನ ಬಂಡಿಯಲ್ಲಿ ಎದುರಾಗುವ ಘಟನೆಗಳು. ವಿದ್ಯಾರ್ಥಿ ಜೀವನದಲ್ಲಿದ್ದಾಗಲೇ ಎರಡೆರಡು ತಿಂಗಳ ಕಾಲ ಲಭ್ಯವಾಗುತ್ತಿದ್ದ ರಜೆ ಯಾಕಾದರೂ ಬರುತ್ತದೆ ಎಂದು ಶಪಿಸುತ್ತಿದ್ದೆ. ಒಂದು ತರಹದ ಅಲರ್ಜಿ. ರಜಾದಿನಗಳು ಪೂರ್ಣವಾಗಿ ಮನೆ ಕೆಲಸ, ಅಡುಗೆ ಕೆಲಸದಲ್ಲಿ ಕಳೆದುಹೋಗುತ್ತಿತ್ತು. ನನ್ನ ಅನುಭವದಲ್ಲಿ ನಾನು ಅಡುಗೆ, ಮನೆ ಕೆಲಸಗಳನ್ನು ಕಲಿತದ್ದು ರಜಾ ದಿನಗಳಲ್ಲಿಯೇ. ಹಾಗೆಯೇ ಅಮ್ಮನಿಂದ ಹೆಚ್ಚು ಪೆಟ್ಟು, ಬೈಗಳು ತಿಂದದ್ದು ಕೂಡಾ ಈ ಅವಧಿಯಲ್ಲಿ. ಸೀದು ಹೋಗುತ್ತಿದ್ದ ಪಲ್ಯ, ಹೆಚ್ಚು ಕಡಿಮೆಯಾಗುತ್ತಿದ್ದ ಉಪ್ಪು, ಖಾರ, ಅನ್ನ ಒಂದಿಷ್ಟು ಹೆಚ್ಚು, ಕಡಿಮೆ ಬೆಂದರೂ ಏಟು ತಪ್ಪುತ್ತಿರಲಿಲ್ಲ. ಅಮ್ಮ ಹೊಲಿಗೆ ಕೆಲಸವನ್ನು ಮನೆಯಲ್ಲಿಯೇ ಮಾಡುತ್ತಿದ್ದರು. ಅವರ ಆಣತಿಯಂತೆ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದೆ. ಆದರೂ ಹೆಚ್ಚು ಕಡಿಮೆಯಾಗುತ್ತಿತ್ತು.

ಆ ನಂತರದ ವೃತ್ತಿ ಜೀವನ, ಭಾನುವಾರದ ರಜೆ, ಅಲ್ಲಿಯೂ ಮನೆಕೆಲಸ ಕೈಬಿಟ್ಟು ಹೋಗುತ್ತಿರಲಿಲ್ಲ. ಮದ್ಯಾಹ್ನದ ನಂತರ ಒಂದು ದೀರ್ಘ ನಿದ್ದೆ, ಅದು ನನಗೆ ಬಹಳ ಖುಷಿ ನೀಡುತ್ತಿತ್ತು, ಆದರದು ಕೈಬಿಟ್ಟು ಹೋಯಿತು. ಈಗ ಊರಿಗೆ ತೆರಳಿದಾಗ ಮಾತ್ರ ಅದು ಮರುಕಳಿಸುತ್ತದೆ.

ಮದುವೆ, ಹೆರಿಗೆ, ಬಾಣಂತನದ ರಜೆ – ಮದುವೆಯಲ್ಲಿ ಔಪಚಾರಿಕ ಸಮಾರಂಭ ಬೇಡವೆಂದರೂ ಮನೆಯವರ ಬಲವಂತಕ್ಕೆ ನಾವು ತಲೆಬಾಗಿದ್ದೆವು. ಆದರೆ ಈ ಸಮಾರಂಭದ ಒಂದು ದಿನದ ಹಿಂದೆ ತನಕ ಸಾಕ್ಷರತಾ ಆಂದೋಲನದ ಬೀದಿನಾಟಕ ಕಲಾತಂಡದ ಪ್ರದರ್ಶನಗಳಲ್ಲಿ ತೊಡಗಿದ್ದೆ. ಮರುದಿನ ರಜೆ, ಈ ರಜೆ ನನ್ನ ಪಾಲಿಗೆ ಇತಿಹಾಸ, ಮದುವೆಯಾಗುವವಳು, ಹೀಗೆ ಬಿಸಿಲಿನಲ್ಲಿ ಅಲೆದಾಡುವುದೇ? ಕಾಗೆ ತರಹ ಕಪ್ಪಾಗಿದ್ದೀಯಾ ಎಂದು ನನ್ನ ಆಂಟಿ ಒಬ್ಬರು ಬ್ಯೂಟಿಪಾರ್ಲರ್ ಒಂದಕ್ಕೆ ಎಳೆದೊಯ್ದಿದ್ದರು. ಅಲ್ಲಿ ಅವರು ಕೇಳಿದ ಶುಶ್ರೂಷೆಗಳೆಲ್ಲವೂ ನಡೆದವು. ನನ್ನ ಬ್ಯೂಟಿಪಾರ್ಲರ್ ಸಹವಾಸ ಆರಂಭದೊಂದಿಗೆ ಅಂದಿಗೆ ಅಂತ್ಯಗೊಂಡಿತ್ತು. ಹೆರಿಗೆ, ಬಾಣಂತನಕ್ಕಾಗಿ ಪಡೆದ 9 ತಿಂಗಳ ಅವಧಿಯ ರಜೆ ನನ್ನ ಪಾಲಿನ ದೀರ್ಘಕಾಲದ ರಜೆ. ಬೆಡ್ ರೆಸ್ಟ್ ಪಡೆಯಬೇಕೆಂದು ಡಾಕ್ಟರ್ ನೀಡಿದ ಸಲಹೆ ಹೆರಿಗೆಗೆ ಮುಂಚಿತವಾಗಿಯೇ 3 ತಿಂಗಳ ರಜೆ ಪಡೆಯಲು ಪ್ರೇರೇಪಿಸಿತ್ತು. ಹೆರಿಗೆಯ ನಂತರದ ಅವಧಿ, ರಜೆ ಬದಲು ಸಜೆ ಎನಿಸತೊಡಗಿತ್ತು. ಹುಟ್ಟಿದ 3 ದಿನಗಳಲ್ಲಿಯೇ ಮಗು ತೀರಿಹೋಗಿತ್ತು, ಇಲ್ಲಿಯೂ ರಜೆ ನನಗೆ ಸಹಕರಿಸಿತ್ತು – ಎಲ್ಲವನ್ನು ಮರೆಯಲು. ಕೇರಳದ ಕಾಸರಗೋಡಿನಲ್ಲಿ ಈ ದಿನಗಳು ಕಳೆದುಹೋಗಿದ್ದವು. ರಜೆ ಮುಗಿಸಿ ಬಂದ ಕೂಡಲೇ ಲೈಂಗಿಕ ಕಾರ್ಯಕರ್ತೆಯರೊಂದಿಗಿನ ಕೆಲಸಕ್ಕೆ ಸೇರಿಕೊಂಡೆ. 1 ವರ್ಷದ ಅವಧಿಯಲ್ಲಿ ಈ ಕೆಲಸವೂ ಮುಗಿದಿತ್ತು. ಆಮೇಲೆ 3 ತಿಂಗಳ

ವಿರಾಮದ ನಂತರ 'ಮತ್ತೊಂದು ಕೆಲಸಕ್ಕೆ ಸೇರ್ಪಡೆಯಾದೆ. 4 ವರ್ಷದಲ್ಲಿ ಆ ಕೆಲಸಕ್ಕೆ ರಾಜಿನಾಮೆ ನೀಡಿದೆ. ಮುಂದಿನ 6 ತಿಂಗಳ ಕಾಲ ರಜೆ. ಮತ್ತೊಂದು ಕೆಲಸ ಗಿಟ್ಟಿಸಿಕೊಳ್ಳುವ ತನಕದ ಅವಧಿ – ಈ ಅವಧಿಯಲ್ಲಿ ನನ್ನ ಮಗಳ ಲಾಲನೆ ಪಾಲನೆಗೆ ಗಮನ ಕೊಟ್ಟಿದ್ದೆ. ಈ ರಜೆ ನನ್ನ ಪಾಲಿನ ಸಜೆ ಎಂದರೆ ಸರಿ. ಕಾರಣ ಅವು ಆರ್ಥಿಕ ಸಂಕಷ್ಟದ ದಿನಗಳಾಗಿದ್ದವು.

ಮುಂದೆ ನಾನು ಸೇರಿದ್ದು, ಸರಕಾರದ ಯೋಜನೆಯೊಂದರ ಅನುಷ್ಠಾನದಲ್ಲಿ ತೊಡಗಿದ್ದ ಸರಕಾರಿ ಸ್ವಾಮ್ಯದ ಸಂಸ್ಥೆಯೊಂದಕ್ಕೆ. ಸರಕಾರಿ ರಜೆಗಳೆಲ್ಲವೂ ನಮಗೆ ಸಿಗುತ್ತಿದ್ದವು. ರಜಾ ದಿನಗಳಲ್ಲಿಯೂ ಕಛೇರಿಯಲ್ಲಿದ್ದು, ಕೆಲಸದಲ್ಲಿ ತೊಡಗುವುದರ ಬಗ್ಗೆ ಆಶ್ಚರ್ಯ ವ್ಯಕ್ತವಾಗುತ್ತಿತ್ತು. ಕಛೇರಿ ಕೆಲಸವನ್ನು ಮನೆಯಲ್ಲಿ ಮಾಡುವ ಬಗ್ಗೆಯೂ ಹೀಗೆ ಆಶ್ಚರ್ಯ ಪಡುತ್ತಿದ್ದರು. ಸುಮಾರು 9 ವರ್ಷಗಳ ಕಾಲ ಪಡೆಯಲು ಅವಕಾಶವಿದ್ದ ರಜೆಗಳು ಶಿಲ್ಕುಗಳಾಗಿ ಉಳಿಕೆಯಾಗುತ್ತಿತ್ತು. ಆದರೆ ಇದ್ದಕ್ಕಿದ್ದಂತೆ ಮತ್ತೆ ನಾನು ರಜೆ ಪಡೆದುದು ನನ್ನ ಗಂಡನ ಮರಣ ಕಾಲದಲ್ಲಿ. ಆಗಲೂ ಮನಸ್ಸನ್ನು ಕೆಲಸದಲ್ಲಿ ತೊಡಗಿಸಿ ಎಲ್ಲವನ್ನೂ ಮರೆಯಲು ತವಕಿಸಿದ್ದೆ, ಹಾಗಾಗಿ ರಜೆಯಿಂದ ಓಡಿಹೋಗೋಣವೆನಿಸುತ್ತಿತ್ತು.

ಕೆಲವೊಮ್ಮೆ ಅನಾರೋಗ್ಯಕ್ಕೊಳಗಾಗುವಾಗ, ಮಗಳ ಅಗತ್ಯಗಳಿಗೆ ನೆರವಾಗಲು, ಗಂಡನ ಶ್ರಾದ್ಧಕ್ಕಾಗಿ, [ಮನೆಯವರನ್ನು ನೋಯಿಸಲಾರದೆ, ಈ ಕರ್ಮ. ಕ್ರಿಯಾದಿಗಳಿಗೆ ಗಮನ ನೀಡುತ್ತೇನೆ.] ಊರಿಗೆ ತೆರಳಲು ರಜೆ ಅನಿವಾರ್ಯ ಅಗತ್ಯ.

ರಜೆಯಲ್ಲಿ ಊರಿಗೆ ತೆರಳಿದ್ದಾಗೊಮ್ಮೆ, ಅಲ್ಲಿ ನೆರೆದಿದ್ದ ಮಕ್ಕಳ ಬಲವಂತಕ್ಕೆ ಸಮುದ್ರ ತೀರಕ್ಕೆ ಭೇಟಿ ನೀಡಿದ್ದೆ. ನೀರಿಗೆ ಇಳಿಯಬೇಕು, ಮುಳುಗಬೇಕೆನಿಸಿದರೂ ಅದು ಊರು,  ಕಟ್ಟುಪಾಡುಗಳು ನೆನಪಾದವು. ತೀರದಲ್ಲಿ ಕುಳಿತು ಬ್ಯಾಗ್, ಮೊಬೈಲ್ ಇತ್ಯಾದಿಗಳನ್ನು ಕಾಯುವ ಕೆಲಸಮಾಡುತ್ತಿದ್ದಾಗ ನೆನಪಾದುದು ಸಮಾನ ಮನಸ್ಕ ಸ್ನೇಹಿತರೊಂದಿಗೆ ಕೆಲಸದ ಮಧ್ಯೆ ಬಿಡುವು ಮಾಡಿಕೊಂಡು ಕುಮಟಾ, ಗೋವಾದ ಸಮುದ್ರ ತೀರಗಳಿಗೆ ಭೇಟಿ ನೀಡಿದ ಅನುಭವ. ನಾವು ಗಂಡು ಹೆಣ್ಣು ಎಂಬ ಬೇಧಭಾವವಿಲ್ಲದೆ ನೀರಿಗಿಳಿಯಲು ಸಾಧ್ಯವಾಗಿತ್ತು. ಪರಸ್ಪರ ನೀರೆರಚಾಟ, ಕಿರುಚಾಟ, ಕೂಗಾಟದಲ್ಲಿ ತೊಡಗಿದ್ದೆವು. ಸ್ವಲ್ಪ ಆಳದ ನೀರಿಗೆ ಇಳಿದು ಅಪಾಯದ ಸುಳಿಗೆ ಸಿಲುಕಿದ್ದ ಸ್ನೇಹಿತೆಯೊಬ್ಬಾಕೆಯನ್ನು ರಕ್ಷಿಸುವಂತೆ ಆಕೆಯೊಂದಿಗಿದ್ದ ಸ್ನೇಹಿತೆಯ ಕೈಚಾಚುವಿಕೆ ನಮಗೆ ಅರ್ಥವಾಗಿರಲಿಲ್ಲ. ಆದರೆ ತಂಡದಲ್ಲಿದ್ದ ಒಬ್ಬ ಸ್ನೇಹಿತ ತಕ್ಷಣ ಅದನ್ನು ಗ್ರಹಿಸಿ, ಧಾವಿಸಿ ರಕ್ಷಿಸಿದ್ದು ಇತಿಹಾಸ. ಈ ಎಲ್ಲಾ ನೆನಪುಗಳು ಕಾಡಿದಾಗ ಹೊಳೆದ ಸತ್ಯ. ನಾವು ಮನೆಯವರೊಂದಿಗೆ ಹೊರಹೊರಟಾಗ ನಮ್ಮ ಜವಾಬ್ದಾರಿ, ನಿರ್ವಹಣೆಯತ್ತಲೇ ಹೆಚ್ಚಿನ ಗಮನ ನೀಡುತ್ತೇವೆ. ಊರಿಗೆ ಸಮೀಪದ ಸ್ಥಳಗಳಿಗೆ ಭೇಟಿ ನೀಡುವಾಗ ಮನಬಿಚ್ಚಿ ಆಸ್ವಾದಿಸುವ ಬಯಕೆಯನ್ನು ಹತ್ತಿಕ್ಕುತ್ತೇವೆ, ಪರಿಚಿತರು ಇರಬಹುದೆಂಬ ಅಳುಕು. ಸಮಾನ ಮನಸ್ಕರೊಂದಿಗೆ ತೆರಳುವಾಗ ಮಾತ್ರ ನಾವು ನಾವಾಗಿರಲು ಸಾಧ್ಯ.



21. Cool Clicks: Anil Angadiki






**: Bayalu Coordinators :**

***Gulbarga: Maihili R:*** **maithili.r@azimpremjifoundation.org**

***Mandya: Divakara K:*** **divakara.k@azimpremjifoundation.org**

***Bangalore: B Ramachandara Bhat:*** **brbhat@azimpremjifoundation.org**

***Yadgir: Shadakshari T S:*** **shadakshari.ts@azimpremjifoundation.org**